Bhūtāḷa Pāṇḍya

Aḷiya-santāna-da Kaṭṭu-Kaṭṭaḷe

1857

Gundert

Bhutāḷa Pāṇḍya

# ಭೂತಾಳಪಾಂಡ್ಯನ

# ಅಳಿಯಸಂತಾನದ

# ಕಟ್ಟುಕಟ್ಟಳೆ.

ಮಂಗಳೂರು:
ಜರ್ಮನ್ ಮಿಶ್ಯನ್ ಪ್ರೆಸ್.
೧೮೫೭.
1857.

# ಭೂತಾಳಪಾಂಡ್ಯನ

# ಅಳಿಯಸಂತಾನದ

# ಕಟ್ಟುಕಟ್ಟಳೆ.

ಮಂಗಳೂರು:
ಜರ್ಮನ್ ಮಿಶ್ಯನ್ ಪ್ರೇಸ್.
೧೮೭೨.

PRINTED BY G. PLEBST
AT THE GERMAN MISSION PRESS MANGALORE.

# ಭೂತಾಳಪಾಂಡ್ಯ.

---

ಶಾಲಿವಾಹನ ಶಕ ವರುಷ ೧ನೇ ಈಶ್ವರನಾಮ ಸಂವತ್ಸರದಲ್ಲಿ ದೇವಪಾಂಡ್ಯನ ಅಳಿಯ ಭೂತಾಳಪಾಂಡ್ಯಗೆ ಮಾಘ ಶು ೩ ಯು ಶುಕ್ರವಾರ ಉತ್ತರಾಭಾದ್ರಾ ನಕ್ಷತ್ರ ವೃಷಭ ಲಗ್ನದಲ್ಲಿ, ದೇವೇಂದ್ರ ವಿಕ್ರಮಾದಿತ್ಯಗೆ ಕೊಟ್ಟ ಸಿಂಹಾಸನದಲ್ಲಿ, ವಿಜಯ ನಗರದಲ್ಲಿ, ಪಟ್ಟಾಭಿಷೇಕವಾಯಿತು. ಅದು ಯಂತೆಂದಡೆ—ಪಾಂಡ್ಯ ದೇಶದಲ್ಲಿ ವೊಬ್ಬ ದೇವಪಾಂಡ್ಯನೆಂಬ ಸಾವುಕಾರನು ಹೊಸ ಹಡಗುಗಳಂ ಕಟ್ಟಿಸಿ, ಅದರಲ್ಲು ಲಕ್ಷಾಂತ್ರ ವರಹಾನ್ನ ವೊಡವೆ ವಸ್ತುಗಳನ್ನ ತುಂಬಿಸಿ, ಹಡಗುಗಳಂ ಇಳಿಸುವ ಸಮಯದಿ, ಆಗ ಹೊಸ ಹಡಗುಗಳೆಂಬ ದೃಷ್ಟಿಯಿಂದ ಕುಂಡೋದರ ಯಂಬ ಶಿವಗಣವು ನರಬಲಿಯಂ ಬೇಡುತ್ತಿದ್ದಂ. ಆಗ ದೇವಪಾಂಡ್ಯನು ತನ್ನ ಮನೆಗಂ ಬಂದು, ತನ್ನ ಹೆಂಡತಿಯಿಂ ಆಲೋಚನೆಯಂ ಮಾಡಿ, ಯೇಳು ಮಂದಿ ಮಕ್ಕಳಿಂದ ಆವನ ಬಲಿಯಂ ಕೊಡುವಾ ಯಂದು ಆಲೋಚನೆಯಂ ಮಾಡುತಿಪ್ಪ ವೇಳ್ಯದಲ್ಲಿ, ಆಗ ಆತನ ಹೆಂಡತಿ ಈ ಯೇಳು ಮಂದಿ ಮಕ್ಕಳಂ ಕರಕೊಂಡು, ತನ್ನ ತೌರು ಊರಿಗಂ ಹೊರಟು ಹೋದಳು. ಆಗ ಈ ದೇವಪಾಂಡ್ಯನೆಂಬ ಸಾವುಕಾರನು ತನ್ನ ಮನೆಯಲ್ಲಿ ಅನ್ನ ನೀರು ಬಿಟ್ಟು, ಬಹಳ ದುಖ್ಖಿತನಾಗಿ ಮಲಗಿರೆ, ಆ ವೇಳ್ಯದಲ್ಲಿ ಈ ಸುದ್ದಿಯನ್ನು ಆತನ ತಂಗಿಯಾದ ಸತ್ಯವತಿ ಯಂಬವಳು ಕೇಳಿ, ಬಂದು, ಅಂಣನ ಮಾತನಾಡಿಸಿ, ವೃತ್ತಾಂತಂಗಳಂ ಕೇಳಿ, ಈ ಸ್ವಲ್ಪ ಕೆಲಸಕ್ಕೆ ನೀವು ಭಯ ಪಡ

ಬೇಡಾ, ನನ್ನ ಮಗ ಜಯಪಾಂಡ್ಯನೆಂಬ ಬಾಲಕನ ನರಬಲಿಯಂ ಕೊಡು, ಈಗ ಯೆದ್ದು ಊಟ ಉಪಚಾರಗಳಂ ಮಾಡು ಯಂದು ವೊಡಂಬಡಿಸಿ, ತನ್ನ ಮಗ ಜಯಪಾಂಡ್ಯನನ್ನು ಕೊಟ್ಟು, ಗಂಡನ ಮನೆಗೆ ಹೊರಟು ಹೋದಳು. ಆ ಜಯಪಾಂಡ್ಯನ್ಯಾರಂದರೆ: ಆ ರಾಜ್ಯದ ವೀರಪಾಂಡ್ಯನೆಂಬ ಅರಸನ ಮಗ. ಆತ ಚಂದ್ರಾಂಗದ ರಾಯನಿಂದ ಪರಾಜಿತನಾದವ. ಆದ್ದರಿಂದ ಬಲಿಯಂ ಕೊಡುವ ವೇಳೆಯಲ್ಲಿ ಈತ ಮಹಾಪುರುಷನೆಂದು ತಿಳಿದು, ಆ ಕುಂಡೋದರನೆಂಬ ಭೂತರಾಜನು ಈ ದೇವಪಾಂಡ್ಯನ ಹಡಗುಗಳಿಗೆ ಬಲಿ ತೆಗದು ಕೊಳ್ಳದೆ ಬಿಟ್ಟು, ಈ ಜಯಪಾಂಡ್ಯನೆಂಬ ಬಾಲಕಗೆ ಪ್ರಸನ್ನನಾಗಿ ಇಂತ್ತೆಂದಂ — ನಾನು ನಿನಗೆ ಪ್ರಸನ್ನವಾದಕಾರಣ ಯಂತ್ತೆಂದಡಾ — ನೀನು ನನ್ನ ಹೆಸರಂಗೊಂಡು, ಭೂತಳಾಧಿಪನಾಗಿ, ಭೂತಾಳಪಾಂಡ್ಯನೆಂಬ ಹೆಸರಂ ನೀನು ಕೊಂಡಲ್ಲಿ, ನಿನ್ನ ಪರಾಜಿತ ಮಾಡಿದ ಚಂದ್ರಾಂಗದನಾಳಿದ ಸಮಸ್ತ ರಾಜ್ಯವನ್ನು ಶಿವನ ಅಪ್ಪಣೆಯಿಂದ ಕೊಟ್ಟೆ ಯಂದು, ಆ ಭೂತರಾಜನು ಆಕ್ಷಣದಲ್ಲಿ ಉಜ್ಜಯನಿ ಯಂಬ ನಗರವಂ ಪೊಕ್ಕು, ಅಲ್ಲಿ ಅಷ್ಟ ಭೈರವಾದಿ ದೇವತೆಗಳಂ ಜಯಿಸಿ, ಅಲ್ಲಿ ವಿಕ್ರಮಾರ್ಕಗೆ ದೇವೇಂದ್ರನು ಕೊಟ್ಟ ಪ್ರತಿನಿಧಿಸಿಂಹಾಸನವನ್ನು ಈ ಭೂತಾಳಪಾಂಡ್ಯಗೆ ಕೊಟ್ಟು, ಆ ಭೂತಾಳಪಾಂಡ್ಯರಾಯ ಸಹಿತವಾಗಿ ಜಯಂತಿಕಾನಗರಕ್ಕೆ ಬಂದು ಪ್ರವೇಶವಾದರು.

ಅಲ್ಲಿ ಪಟ್ಟಸಿಂಹಾನನವನ್ನು ಆಳುವ ಸಿದ್ಧವೀರಪ್ರಸಿದ್ಧರಾಯನು ರಾಜ್ಯಭಾರ ಮಾಡಿ ಕೊಂಡು ಇರುವಾಗ್ಯೆ, ಆ ಅರಸಿಗೆ ಈ ಕುಂಡೋದರನು ನಾನಾ ಉಪಹತಿಗಳಂ ಕೊಟ್ಟು, ಸಂಹರಿಸಿ, ಆ ಸಿದ್ಧವೀರಪ್ರಸಿದ್ಧರಾಯಗೆ ಸಂತಾನ ಇಲ್ಲದಕಾರಣ, ಆವಾಗ ಸಮಸ್ತ ಪ್ರಜೆ ಪರಿವಾರಗಳು ಕೂಡಿ,

ಆನೆ ಸುಂಡಿಲೊಳು ಹೂವಿನ ಮಾಲೆಯಂ ಕೊಟ್ಟು, ಮೆರವಣಿಗೆ ಮಾಡುವ ಸಮಯದಲ್ಲಿ, ಆ ಆನೆಯು ಈ ಜಯಪಾಂಡ್ಯನೆಂಬ ಬಾಲಕನ ಕೊರಳಿಗೆ ಹೂಮಾಲೆ ಹಾಕಿ, ದೇವೇಂದ್ರನ ಸಿಂಹಾಸನದಲ್ಲಿ ಆ ಬಾಲಕನ್ನ ಕುಳ್ಳಿರಿಸಿ, ಮೊದಲು ಹೇಳಿದ ಲಗ್ನಕಾಲದಲ್ಲಿ ಈ ಸಿಂಹಾಸನ ಸಹಿತವಾಗಿ ಬಾಲಕನ್ನ ತಂದು, ಆ ಅರಮನೆಯ ಸಭಾಮಧ್ಯದಲ್ಲಿ ಇಟ್ಟು, ಈ ಗಜೇಂದ್ರನು ಯರಗುತ್ತಿರಲು, ಆಗ ಸಮಸ್ತ ಪ್ರಜೆ ಪರಿವಾರಗಳು ಅವನನ್ನು ಪಟ್ಟಾಭಿಷೇಕವಂ ಮಾಡಿ, ಪಟ್ಟಾಕಟ್ಟಿ, ಉಡುಗರೆ ಉಚಿತ, ಪಟ್ಟಾಪಟ್ಟ ಕಾಣಿಕೆಯ ಮಾಡಿಸಿ, ತಮ್ಮ ತಮ್ಮ ಮನೆಗಳಿಗೆ ಹೋದರು.

ಆ ಮೇಲೆ ಆರು ವರ್ಷ ಪರ್ಯಂತರ ಆ ಅರಸನು ರಾಜ್ಯಭಾರ ಮಾಡಿ ಕೊಂಡಿರುವ ಮಧ್ಯದಲ್ಲಿ, ಆ ವೇಳ್ಯ ಮಕ್ಕಳ ಸಂತಾನವಂ ತೆಗದು, ಅಳಿಯ ಸಂತಾನವಾದ ಕಾರಣ ವೆಂತೆಂದಡಾ—ಆರನೇ ವರುಷ ಚಿತ್ರಭಾನು ಸಂವತ್ಸರದಲ್ಲಿ ಆ ದೇವಪಾಂಡ್ಯನ ಪಡಗುಗಳು ಗಿರಿಗತ್ತಲೆ ಹಿಮ ಮುಸುಕಿದ ದ್ವೀಪಾಂತರಕ್ಕೆ ಹೋಗಿ, ಅಲ್ಲಿ ವಂದು ಕಡೆ ಕೆಸರಲ್ಲಿ ಹೂಳಿ, ಆಗ ಆ ಹಡಗುಗಳಲ್ಲಿ ತುಂಬಿಸಿದ ಜೀನಸು ನೀರು ಸಹಾ ಖರ್ಚು ಆದ ವೇಳ್ಯದಲ್ಲಿ, ಈ ದೇವಪಾಂಡ್ಯನ ಕಡೆ ಆ ಹಡಗುಗಳ ಮೊಕಸ್ತ ನಾರಾಯಣಪಾಂಡ್ಯ ಯಂಬಾತನೂ ಆ ಹಡಗುಗಳ ಜನರುಗಳೂ ದುಃಖ ಪಡುತ್ತಿರುವ ಸಮಯದಿ, ಈ ಕುಂಡೋದರನು ಪ್ರಸನ್ನನಾಗಿ, ಯಲೇ ನಾರಾಯಣಪಾಂಡ್ಯನೇ ಕೇಳು, ನೀನು ಭಯ ಪಡ ಬೇಡಾ! ಇದರಿಂದ ಪಶ್ಚಿಮದಿಕ್ಕಿನಲ್ಲಿ ವಂದು ಪರ್ವತ ಉಂಟು. ಅಲ್ಲಿ ಹಿಂದೆ ಸಿದ್ಧರು ಮಾಡಿದ ಸಿದ್ಧರಸಗಳುಂಟು ಹಸರುಶಿಲೆಗಳುಂಟು. ಆ ಸಿದ್ಧರಸಗಳ ಕಾಪ್ಪರಿಗೆ ಮೊದಲಾದ ಪಾತ್ರಗಳಲ್ಲಿ ತುಂಬಿಸಿಕಾ. ಆ ಹಸರುಶಿಲೆಗಳನ್ನು ತುಂಬಿಸಿಕಾ. ಆಗ್ಯ

ತನ್ನ ಪ್ರಾರ್ಥನೆಯಂ ಮಾಡು. ಆಗ ಈ ಮೂರು ಹಡಗುಗಳೂ ಯೇ
ಳುತ್ತಾವೆಂದು ನುಡಿದು ಹಿರಿಯುತ್ತಿದ್ದಂ. ಆಗ ಬಿಡದ್ಯೋಣಿಗಳ ಬಿಟ್ಟು
ಹಸರುಶಿಲೆ ಸಿದ್ಧರಸಗಳ ತುಂಬಿಸಿ, ಕುಂಡ್ಯೋದರಗೆ ಪ್ರಾರ್ಥನೆಯಂ ಮಾಡ
ಲು, ಆ ವ್ಯೇಳ್ಯದಲ್ಲಿ ಮಹಾ ಸುಳಿಘಾಳಿಗಳೆದ್ದು, ಆ ಹಡಗುಗಳು ಹಂಗಾ
ರಕಟ್ಟೆ ಯಂಬ ಅಳವ್ಯೇ ಬಾಗಲಿನಿಂದ ವೊಳಗಾಗಿ, ಕಲ್ಯಾಣಪುರದಲ್ಲಿ ನೆ
ಲೆಗೊಂಡವು. ಆಗ ಅಲ್ಲಿಯ ಸಾವಕಾರರುಗಳು ಬಂದು, ಶೃತದೃಷ್ಟಿ ಮಾ
ಡುವಾಗ್ಯೆ, ಅದರಲ್ಲಿ ಹಸರುಶಿಲೆ ಸಿದ್ಧರಸ ಸಹಾ ಇರುವದರಿಂದ, ಭೂತಾ
ಳಪಾಂಡ್ಯ ರಾಯಗೆ ಅರಿಕೆ ಮಾಡಿದರು. ಆಗ ಆ ಭೂತಾಳಪಾಂಡ್ಯ ರಾ
ಯನು ಬಂದು, ಯರಡನೆ ಶೃತದೃಷ್ಟಿ ಮಾಡುವ ವ್ಯೇಳ್ಯದಲ್ಲಿ, ತನ್ನ ಮಾವ
ನಾದ ದ್ಯೇವಪಾಂಡ್ಯನ ಹಡಗುಗಳಾದ ಕಾರಣ, ಆ ವ್ಯೇಳ್ಯದಲ್ಲಿ ಪಾಂಡ್ಯ
ದ್ಯೇಶಕ್ಕೆ ಕಳುಹಿಸಿ ಕೊಟ್ಟು, ತನ್ನ ಮಾವ ದ್ಯೇವಪಾಂಡ್ಯನನ್ನ ಕರಸಿ, ನಿನ್ನ ಹ
ಡಗಿನಲ್ಲಿ ಬಂದ ವಡವೆ ವಸ್ತುಗಳ ತೆಗದು ಕೊಂಡು ಹ್ಯೋಗು ಯಂತಾ,
ಈ ಭೂತಾಳಪಾಂಡ್ಯ ರಾಯನು ಹ್ಯೇಳುತ್ತಿರುವ ಸಮಯದಲ್ಲಿ, ಆಗ ಈ
ಕುಂಡ್ಯೋದರನು ಈತನ ಮಕ್ಕಳೊಳಗೆ ಯಾರನ್ನಾದರೂ ಬಲಿಯಂ ಕೊಡ
ದೆ, ಈ ಹಡಗುಗಳ ಬಿಡೆ ಯಂದನು. ಆಗ ತನ್ನ ಹೆಂಡತಿ ಮಕ್ಕಳನ್ನ
ಕರಸಿ, ಈ ವಡವೆ ವಸ್ತುಗಳ ತ್ಯೋರಿಸಿ, ಇದರೊಳಗೆ ಯಾರನ್ನಾದರೂ ನರ
ಬಲಿಯಂ ಕೊಡುವಾ ಯಂತಾ ಹ್ಯೇಳಿ, ಆಲ್ಯೋಚಿಸುವ ಸಮಯದಲ್ಲಿ, ಈ ಹ
ತ್ತುಸಾವಿರ ಮಹಾಜಗತ್ತಿನವರ ಮುಂದೆ ಈ ವಡವೆ ವಸ್ತುಗಳಿಗೆ ಕಾರಣಾವಿ
ಲ್ಲವೆಂದು ಇಳಿದು ಹ್ಯೋದಳು. ಆಗ್ಯೆ ಈ ಹತ್ತುಸಾವಿರ ಮಹಾಜಗತ್ತಿನ
ವರು ಅರಸು ಪ್ರಜೆ ಪರಿವಾರ ಮೊದಲಾಗಿ ಈ ಭೂತಾಳಪಾಂಡ್ಯ ರಾಯ
ನ ಆದಿವೃತ್ತಾಂತಂಗಳಂ ತಿಳಿದು, ಈ ಸಿದ್ಧರಸ ಸಿದ್ಧಶಿಲೆಗೆ ಈ ಭೂತಾಳ

ಪಾಂಡ್ಯ ರಾಯನೇ ಬಾಧ್ಯಸ್ಥನೆಂದು, ಈ ಜನರುಗಳ ನಿವೃತ್ತಿ ಪ್ರಕಾರಕ್ಕೆ ಆ ಸಿದ್ಧರಸಗಳನ್ನೂ ಸಿದ್ಧಶಿಲೆಗಳನ್ನೂ ತಾನೇ ಬಾಧ್ಯಸ್ಥನಾಗಿ ತೆಗದು ಕೊಂಡು, ಆ ಸಿದ್ಧರಸವನ್ನು ಸ್ವಾಮ್ಯೇಶ್ವರನ ಸನ್ನಿಧಿಯಲ್ಲಿ ರಸಸ್ರಾವಿ ಮಾಡಿ ಇರಿಸಿ, ಆ ಸ್ವಾಮ್ಯೇಶ್ವರಗೆ ಸಿದ್ಧೇಶ್ವರನೆಂಬ ಹೆಸರಿಟ್ಟು, ಆಗ ಈ ಕುಂಡ್ಯೋದರಗೆ ಸ್ಥಾನಮಾನಗಳ ಕಟ್ಟಿ, ಆ ತಕ್ಕ ಬಿಂಬವನ್ನು ಪ್ರತಿಷ್ಠೆ ಮಾಡಿ, ಮಹೀಪಾಲಕನಾದ ಮಹಿಷಾಸುರನೆಂಬ ಹೆಸರಿಟ್ಟು, ಆತನಿಗೆ ಬಲಿ ಕೊಡುವದಕ್ಕೆ ಸಹಸ್ರ ಪಡಿ ಅಕ್ಕಿ, ಸಹಸ್ರ ಪಡಿ ಅರಳು ಅವಲಕ್ಕಿ, ಸಹಸ್ರ ಕಾಯಿ ಶೀಯಾಳ ಬಾಳೇಹಂಣು, ಸಹಸ್ರ ಪಟ್ಟಿ ವೀಳ್ಯದೆಲೆ, ಹಿಂಗಾರ ಧೂಪದೀಪಾದಿಗಳಿಂದ ಅಜ ಕುಕ್ಕುಟ ಸಹಸ್ರವಾದ ಬಲಿಯಂ ಕೊಟ್ಟು, ಸಮಸ್ತ ಪ್ರಜೆ ಪರಿವಾರಗಳು ಪ್ರಾರ್ಥನೆಯಂ ಮಾಡುವ ಸಮಯದಲ್ಲಿ, ಈ ಕುಂಡ್ಯೋದರನು ವಬ್ಬ ಮನುಷ್ಯನ ಮೈ ಮೇಲೆ ಬಂದು, ಅರಸುಗಳಿಗೂ ಪ್ರಜೆಗಳಿಗೂ ವಂದೇ ಕಟ್ಟಿನಲ್ಲಿ ನಡಿಯ ಬೇಕೆಂಬ ನಂಬಿಗೆಯಂ ಕೊಟ್ಟು, ಯಲ್ಲವರೂ ವಂದೇ ಬುದ್ಧಿಯಿಂದ ನಡಕೊಳ್ಳುತ್ತೇವೆ ಯಂಬ ಕಟ್ಟು ಕೈ ಹಿಡಿದ ಮೇಲೆ, ಅರಸುಗಳಿಗೂ ಪ್ರಜೆಗಳಿಗೂ ಅಳಿಯ ಸಂತಾನದಲ್ಲಿಯೇ ನಡೆಯ ಬೇಕೆಂಬ ಹದಿನಾಲ್ಕು ಕಟ್ಟಳೆ ಕಟ್ಟು, ಹದಿನಾರು ಕಟ್ಟಳೆ ಸಹಾ, ಜಗತ್ತಿನ ನರಸಿಂಹ ದೇವರ ಮಧ್ಯಮಂಟಪದಲ್ಲಿ ಬರಸಿ, ಜಗತ್ತಿನ ಅನಂತೇಶ್ವರ ದೇವರ ಮಧ್ಯಮಂಟಪದಲ್ಲಿ ಸ್ಥಾಪನೆಯಂ ಮಾಡಿ, ಈ ಕಟ್ಟು ಕಟ್ಟಳೆ ಮೀರಿ ನಡದವನ ಸಂತಾನ ನಿಸ್ಸಂತಾನವಾಗಿ ಹೋಗಲಿ ಯಂತಾ ಕಟ್ಟು ಕೈ ಹಿಡಿದು, ಬಳಿಸಾವಿರ ಬ್ರಹ್ಮನಂ ಈ ಮಹಿಷಾಸುರನಂ ಈ ಕಟ್ಟಿಗೆ ಅಧಿದೇವತೆಗಳೆಂದೂ, ಈ ನರಸಿಂಹ ಅನಂತೇಶ್ವರ ಕುಲದೇವತೆಗಳೆಂದೂ, ದಿಕ್ಕು ದಿಕ್ಕಿನಲ್ಲಿ ಈ ಪ್ರಜೆ ಪರಿವಾರಗಳಿಗೆ ಬ್ರಹ್ಮನಂ ಅನಂತೇ

ಶ್ವರ ದೇವಸ್ಥಾನದ ಕ್ಷೇತ್ರಪಾಲನಂ, ಈ ಜಗತ್ತಿನ ನರಸಿಂಹ ದೇವರ ಬಲಭಾಗದ ರಕ್ತೇಶ್ವರಿಯಂ, ಈ ಕುಂಡೋದರ ಮಹಿಷಾಸುರನಂ, ಈ ೧೮ ಬಳಿ ಅಳಿಯ ಸಂತಾನಕ್ಕೆ ಸ್ಥಾನದೇವತೆಗಳೆನಿಸಿ, ಈ ಭೂತಾಳಪಾಂಡ್ಯ ರಾಯನು ಹನ್ನೆರಡು ವರುಷ ರಾಜ್ಯವನ್ನಾಳುತ್ತಿರುವ ಮಧ್ಯದಲ್ಲಿ, ಈ ಭೂತಾಳಪಾಂಡ್ಯ ರಾಯಗೆ ಕಲ್ಯಾಣ ಆಗಲ್ಯೋಸ್ಕರ, ಪಟ್ಟದ ಮೇಲೆ ಕಳುಹಿಸಿ ಕಾಟ್ಟು, ಅಲ್ಲಿ ಜೈನರ ಜಾತಿ ಕೆಸವಣ್ಣ ಬಸವಣ್ಣ ಯಂಬವರ ಕರಸಿ, ಅವರ ಮುಖದಲ್ಲಿ ಹನ್ನೆರಡು ಕನ್ನಿಕೆಯರ ಕರಿಸಿ, ಲಗ್ನವಂ ಮಾಡಿಕೊಂಡು, ಆ ಜಯಂತಿಕಾ ಯಂಬ ನಗರಕ್ಕೆ ಹನ್ನೆರಡು ಕನ್ನಿಕೆಯರ ವಿವಾಹವಾದ ಕಾರಣ, ಬಾರಕನ್ಯಾಪುರ ಯಂಬ ಹೆಸರಂ ಇಟ್ಟು, ಆ ಹನ್ನೆರಡು ಕನ್ನಿಕೆ ಪಟ್ಟದ ರಾಣಿಯರಿಗೆ ಹನ್ನೆರಡು ಬಸ್ತಿ ರಚಿಸಿ, ಹನ್ನೆರಡು ಶಿವಾಲಯ, ಹನ್ನೆರಡು ವಿಷ್ಣು ಆಲಯ, ಹನ್ನೆರಡು ದುರ್ಗಾಲಯ, ಹನ್ನೆರಡು ಗಣಪತಿ, ಹನ್ನೆರಡು ನಾಗ, ಬ್ರಹ್ಮ, ಕ್ಷೇತ್ರಪಾಲ, ರಕ್ತೇಶ್ವರಿ, ಮಹಿಷಂತಾಯ ಯಂಬ ಸ್ಥಾನಗಳಂ ರಚಿಸಿ, ಆಗ ಚತುರ್ಲಕ್ಷ ಗುಡಿ ಮನೆಗಳ ಉಂಟು ಮಾಡಿ, ಆ ಚತುರಸ್ರದಲ್ಲು ನಗರೇಶ್ವರನ ಪ್ರತಿಷ್ಠೆಯಂ ಮಾಡಿ, ತಾನು ತಾನೆಂಬ ಬಿರಿದಾವಳಿ ಯಂತೆಂದಡಾ.

ಶ್ರೀಮದ್ರಾಜಾಧಿರಾಜ, ರಾಜೇಂದ್ರಸಿಂಹಾಸನಾಧೀಶ್ವರ, ತುಳು ಮಲೆಯಾಳ ಹೈಗ ಕರ್ನಾಟಕ ಚತುರ್ದೇಶಾಧಿಪಾಧೀಶ್ವರ, ಶಾಲಿವಾಹನಶಕಾದಿಪುರುಷ, ಚೌಷಷ್ಠಿ ಪ್ರಧಾನ ಯೋಗಯೋಗೇಶ್ವರ, ವೀರಪಾಂಡ್ಯಕುಮಾರ, ಸತ್ಯವತಿಬಾಲ, ಜನಕುಲನಿಜಕ್ಷಾತ್ರ, ಭೂತಳಾಧೀಶ, ವೀರಾದಿವೀರ, ವೀರಮಹಾಪ್ರತಾಪಧೀರ, ವಸಂತವೀರ, ಬಾರಕನ್ಯಾಪುರವರಾಧೀಶ್ವರ.

ಆಗ ಈ ಜಗತ್ತಿನ ಷೋಡಶ ಮರ್ಯಾದೆಗಳ ಕೈಕೊಂಡು, ಈ ಜಗ

ತ್ತಿನ ಮಹಾ ಜನರುಗಳ ಆರಾಧನೆ ಮಾಡಿ ಕೊಂಡು, ಗುರು ದೇವರ ಭಕ್ತನಾಗಿ, ದುಷ್ಟನಿಗ್ರಹ, ಶಿಷ್ಟಪರಿಪಾಲತ್ವ ಉಳ್ಳವನಾಗಿ, ಆವಾವ ಜಾತಿ ಧರ್ಮಗಳನ್ನು ನಡಯಿಸಿಕೊಂಡು ಬರುವ ಸಮಯದಲ್ಲಿ, ಈ ಹನ್ನೆರಡು ಪಟ್ಟದ ರಾಣಿಯರಿಗೆ ಹೆಣ್ಣು ಗಂಡು ಮಕ್ಕಳು ಸಮನಾಗಿ ಹುಟ್ಟುತ್ತಾ ಇರುವಲ್ಲಿ, ಆತನ್ಮಧ್ಯದಲ್ಲಿ, ಹನ್ನೆರಡು ಮಂದಿ ಮಕ್ಕಳಿಗೆ ತನ್ನ ರಾಜ್ಯದಿಂದ ಸುರಜೆಗಳ ವಿಂಗಡಿಸಿ, ಅಂನ್ಯತವಾಗಿ ಕೊಟ್ಟ ಅರಸುಗಳ ವಿವರ—ಚವುಟ ಬಂಗರೆಂಬ ಸಂಸ್ಥಾನವೆರಡು. ಮೂಲರ ತುಳುವರರೆಂಬ ಅರಸ್ತನವೆರಡು. ಅಜಲ ಸಾವಂತರೆಂಬ ಧಾರೆತನವೆರಡು. ಭೈರಸ ಭಾರಸ ಯಂಬ ದಿವಾನರೆರಡು. ಕುಂದ ಬುಂನಾಳರೆಂಬ ವಡ್ಡು ಯರಡು. ನೇರಂಕಿ ಕಡರ್ರೇಶರೆಂಬ ಚಾವಡಿ ಯರಡು. ಈ ಹನ್ನೆರಡು ಮಂದಿ ಅರಸುಗಳಲ್ಲಿ ಚವುಟ ಬಂಗರು ಮುಖ್ಯ. ಈ ತುಳುವರ ಪಕ್ಷ ಯರಡರ ಪಕ್ಷನಾಥರ ಪ್ರತಿಪ್ರಭುಗಳೆನಿಸಿ, ಈ ಕೆಸವಣ್ಣ ಬಸವಣ್ಣನಿಂದ ಉಂಟಾದ ಮುವ್ವತ್ತೆರಡು ಪೇಟೆ ಪಟ್ಟಣವೆಂಬ ನಗರಕ್ಕೆ, ಈ ಮಕ್ಕಳ ಸಂತಾನವಾದ ಸಪ್ತಗೋತ್ರಕ್ಕೆ ಈ ಅಳಿಯ ಸಂತಾನವಾದ ೧೮ ಬಳಿಗೂ ಈ ಉಭಯ ಪಕ್ಷನಾಥರು ಪಕ್ಷಪ್ರಭುಗಳು, ಈ ತುಳುವರ ಅರಸುಗಳಾದ ಉಭಯ ಪಕ್ಷನಾಥರುಗಳು ಬಲ್ಲಾಳರಾದ ಇವರುಗಳಿಗೆ ಈ ಜಾತಿಗಳ ತಿದ್ದಪಡಿಗಳ ಮಾಡಿಕೊಂಡು ಬರಬೇಕೆಂದು ನೇಮಿಸಿದನಾ ಭೂತಾಳಪಾಂಡ್ಯ.

ಆ ಪ್ರಕಾರದಲ್ಲಿ ೭೪ ವರುಷವನ್ನು ಸಾಂಭ್ರಾಜ್ಯವನ್ನಾಳಿ, ತನ್ನ ಅಳಿಯನಾದ ವಿದ್ಯುದ್ಯುಮ್ನಪಾಂಡ್ಯ ರಾಯಗೆ ರಾಜ್ಯಭಾರವನ್ನು ನೇಮಿಸಿ, ಆ ವಿದ್ಯುದ್ಯುಮ್ನಪಾಂಡ್ಯ ರಾಯನು ೮೧ ವರುಷ ರಾಜ್ಯಭಾರವ ಮಾಡುವ ಮಧ್ಯದಲ್ಲಿ, ಆತಗೆ ೧೨ ಮಂದಿ ಪಟ್ಟದ ರಾಣಿಯರಲ್ಲಿ ಹುಟ್ಟಿದ

ಮಕ್ಕಳಿಗೆ ವಿಂಗಡಿಸಿ ಕೊಟ್ಟ ಬುಂಗಡಿ ಅರಸುಗಳ ವಿವರಾ—ಮರದಡೆ ಮಾರಂಬಡೆ ಯಂಬ ಅಡೆ ೨. ಕಟ್ಟಪಾಡಿ ಕೂಳೂರು ಯಂಬ ಧಾರೆಬಲ್ಲಾಳ ೨. ಪಡುಬಿದ್ರೆ ಇರವತ್ತೂರು ಕಿಂನರಿಬಲ್ಲಾಳ ೨. ಮುದುರು ಮುದ್ದಾಲ ಯಂಬ ಕಿಂನರಿಅರಸುಗಳು ೨. ಯಳನಾಡು ಐನಾಡು ಹೆಗ್ಗಡೆ ೨. ಮುದ್ರಾಡಿ ಕಾಂತಾವರ ಕಿಂನರಿಹೆಗ್ಗಡೆ ೨. ಇವು ೧೨ ಮಂದಿ ಬುಂಗಡಿ ಅರಸುಗಳು. ಪಟ್ಟವಾಗಿ ೬ನೇ ವರುಷದಲ್ಲಿ ಉಂಟಾದ ಕಥೆಯ ವಿವರ: ಆ ವಿದ್ಯುದ್ಯುಮ್ನಪಾಂಡ್ಯ ರಾಯಗೆ ಈ ಕುಂಡೋದರನು ಅಂತರವಾಣಿಯಾಗಿ, ಕಲಿಯುಗ ಬಂದ ಕಾರಣ, ಈ ಹಸರುಶಿಲೆ ರತ್ನಭಂಡಾರಗಳನ್ನು ಸ್ಥಾಪನೆ ಮಾಡಿ, ರಸತ್ತಾವಿಗೆ ಕಲ್ಲು ಮುಚ್ಚಿ, ನಾಗರ ಪ್ರತಿಷ್ಟೆಯಂ ಮಾಡಿ, ಈ ಚೌಟ ಬಂಗ ಮೊದಲಾದ ಅರಸುಗಳಿಂದ ಕಪ್ಪಗಳ ತೆಗದು ಕೊಂಡು, ಆತನು ೮೧ ವರುಷ ರಾಜ್ಯವಾಳಿ ಮೃತವಿಟ್ಟ ಮೇಲೆ, ಆತನ ಸಂತಾನ ಯೇಳು ತಲೆ ಪರ್ಯಂತರ ಆಳಿದ ಅರಸುಗಳು: ಭೂತಾಳಪಾಂಡ್ಯ ರಾಯ ೭೫, ವಿದ್ಯುದ್ಯುಮ್ನಪಾಂಡ್ಯ ರಾಯ ೮೧, ವೀರಪಾಂಡ್ಯ ರಾಯ ೩೨, ಚಿತ್ರವೀರ್ಯಪಾಂಡ್ಯ ರಾಯ ೧೬, ದೇವವೀರಪಾಂಡ್ಯ ರಾಯ ೯, ಬಲವೀರ್ಯಪಾಂಡ್ಯ ರಾಯ ೧೯, ಜಯವೀರ್ಯಪಾಂಡ್ಯ ರಾಯ ೨೭, ಅಂತು ಅರಸುಗಳು ೭ರ ವರುಷ ೨೫೯ ರಾಜ್ಯವಾಳಿದರು.

ಕಟ್ಟುಗಳ ವಿವರ.

ಬ್ರಾಹ್ಮಣರಹೊರ್ತು ತ್ರಿವರ್ಣಜಾತಿಗಳಿಗೆ ಮಾಡಿದ ೧೪ ಕಟ್ಟುಗಳು ಯಂತೆಂದಡಾ: ಜಾತಿ, ನೀತಿ, ಮಾನ, ಮರ್ಯಾದಿ, ಹುಟ್ಟು, ಕಟ್ಟು, ಹಿಂದೆ, ಮುಂದೆ, ಹೆಜ್ಜು, ಕಂಮಿ, ಬಳಿ, ಬಂಣ, ಅಳಿ, ಉಳಿ, ಇವು ೧೪ ಕಟ್ಟುಗಳು. ಇದರ ವಿವರ.

ജാതി നീതി യംദഡെ—ആയാ ജാതി സ്വധൎമ്മഗളു. മാന മൎയ്യാദി യംദഡെ—സ്വലാചാരദ ബിരിദു ബാവലിഗളു. ഹുട്ട കട്ടു യംദഡെ—സകല ജാതിഗള മക്കള സംതാന തെഗദു അളിയ സംതാന നേമിസിദ്ദു. ഹിംദെ മുംദെ യംദഡെ—൪, ൮, ൧൬, നാല്കു യംടു ഹദിനാരു പട്ട പട്ടാവളി യംബ ഊചു നീചുഗളു. ഹെച്ചു കംമി യംദഡെ—ആവാവ ജാതിഗെ തക്ക മൎയ്യാദിഗളു. ബളി ബംഗ യംദഡെ—സ്ഥാന മാസ ഇല്ലദവരു. അളി ഉളി യംദഡെ—സാവു ബാളു ബദുകു ശിക്കുവംഥാദ്ദു.

ജാതി നീതി യംബ വിവര—ജാതി തുളുവരു, മലവരു, നായംമാരരു, മാസാദിക, ജൈനരു, ഹരിശെട്ടെ, പരിയരു, കുംബാരരു, ദേവഡിഗ, സാലിയ, മലെകുഡിയ, പാംചാല, ക്ഷൌരിക, അഗസ, ഹളെപൈക, മുംഡാള, കരിംബാര, ഹാലെയ, അംദ്യേകാരഗ, ഇത്യാദി ജാതിഗളിഗെ നീതി യംതെംദനാ ഭൂതാളപാംഡ്യ. ആവാവ ജാതി ജാതിഗളിഗെ ഊച നീചഗളൂ, അവരവര നീതിഗളൂ ഇദ്ദംതെ, കൂഡി നഡകാള്ള ബേകു യംതാ നീതിഗള നേമിസിദനാ ഭൂതാളപാംഡ്യ.

മാന മൎയ്യാദിഗളു യംതെംദഡാ—സ്ഥള മനെ, അരസു ബല്ലാള, ഹെഗ്ഗഡെഗള പുരപ്പു, നാമ കീൎത്തിഗളു, സ്ഥള മനെ ഗ്രാമ ശീമെഗളു ഉള്ള പേടെ പട്ടണഗളുള്ള ഗ്രാമ ഭൂമിയല്ലി ൪, ൮, ൧൬. ബാളു ഭൂതദ മേലെ ഉള്ള ഭൂമിഗളു മൂലവെംദു വിവരിസി മൊദലു ൪, ൮, ൧൬, മുംതാദ അരസു പട്ട പട്ടി പഗദി ഉംടാദ അളി ഉളി പൎയ്യംതര താരതമ്യാനുസാര നഡദു ബരുവദേ ഹാൎത്ഥ,

ಪಾವನಕ ಮರ್ಯಾದಿಗೆ ಅಪ್ರಾಹವಿಲ್ಲದೆ ನಡದು ಬರ ಬೇಕೆಂದು ಕಟ್ಟು ಶ್ಯೇರಿಸಿದನಾ ಭೂತಾಳಪಾಂಡ್ಯ.

ಹುಟ್ಟು ಕಟ್ಟು ಯಂತೆಂದಡಾ—ಮಕ್ಕಳ ಸಂತಾನ ತೆಗದು ಅಳಿಯ ಸಂತಾನವ್ಯೇ ನಡಿಯ ಬ್ಯೇಕೆಂತಾ ಜಗತ್ತಿನ ಅನಂತ್ಯೇಶ್ವರನ ಮಧ್ಯಮಂಟಪದಲ್ಲಿ ಕಟ್ಟುಗಳ ಬರದು, ಇದ ಮೀರಿದವನ ಸಂತಾನ ನಿಸ್ಸಂತಾನವಾಗಲಿ ಯಂಬ ಕಟ್ಟಂ ಬರದು, ಸ್ಥಾಪನೆ ಮಾಡಿದ ಹುಟ್ಟು ತೆಗದು ಅಳಿಯ ಸಂತಾನದ ಕಟ್ಟು ಮಾಡಿದನಾ ಭೂತಾಳಪಾಂಡ್ಯ. ಹುಟ್ಟು ಯಂತೆಂದಡಾ—ಸೂತಕ ಪಾತಕ, ಪಾಪ ಪುಣ್ಯ, ದಾನ ಧರ್ಮ, ಕೀರ್ತಿ ಅಪಕೀರ್ತಿ, ಹೆಂಡತಿ ಮಕ್ಕಳಿಗಲ್ಲದೆ, ಸಂತಾನಕ್ಕೆ ವಾರ್ಧಿಕ ಹಾರ್ತು, ಸೂತಿಕಾದಿಗಳು ಇಲ್ಲಾ, ಬದುಕಿಗೆ ಕಾರಣವೆಂಬ ಕಟ್ಟು ಬರಸಿದನಾ ಭೂತಾಳಪಾಂಡ್ಯ.

ಕಟ್ಟಳೆ ಯಂತೆಂದಡಾ—ಬ್ರಹ್ಮಣ ಮೂಲಕದಲ್ಲಿ ಶುಭಧಾರೆಗಳು ಇಲ್ಲಾ. ಸತ್ತರೆ ಮ್ಲೋಳ ಕಾರ್ಯಗಳು ಇಲ್ಲಾ. ಹೆತ್ತರೆ ಸತ್ತರೆ, ದರ್ಭೆ ಹಿಡಿದು ಪಂಚಗವ್ಯ ಪುಣ್ಯ ಹ್ಯಾಮಕ್ಕೆ ಕಾರಣವಿಲ್ಲಾ. ಹೆತ್ತರೆ ಸತ್ತರೆ, ದ್ಯೇವಸ್ಥಾನದಲ್ಲಿ ಇರುವ ನಿರ್ಮಾಲ್ಯ, ಹೆತ್ತವರ ಸತ್ತವರ ಹೆಸರಲ್ಲು ದ್ಯೇವರ ಪೂಜೆ ಅಭಿಷ್ಯೇಕ ಶಾಂತಿ ಸಮಾರಾಧನೆಗಳು ಇತ್ಯಾದಿ ಮಾಡಿಸಿ ಕಾಂಡಿರುವದು ಯಂದು ಶಾಸ್ತ್ರಗಳ ನಿಲ್ಲಿಸಿದನಾ ಭೂತಾಳಪಾಂಡ್ಯ.

ಹೆಚ್ಚು ಕಟ್ಟಳೆ ಯಂತೆಂದಡೆ—ಹೆಂಣು ನೆರದರೆ, ನ್ಯೇರಿನ ಮಂಟಪ, ನಾಲ್ಕು ಕಂಭಕ್ಕೆ ಹಾದಿಕೆ, ಮ್ಯೇಲುಗಟ್ಟು, ನಡೆಮಡಿ, ನಡೆಚಪ್ಪರ, ನಡೆವಾದ್ಯ ನೃತ್ಯ ಗೀತಾದಿಗಳು ಶುಭಮರ್ಯಾದಿ ಉಂಟೆನಿಸಿ; ಸತ್ತರೆ, ನೆಲೆಉಪ್ಪರಿಗೆ, ಪರಿಸಹಿತವಾದ ವಾದ್ಯ, ಭ್ಯೇರಿ ದ್ಯಾಲು ಘಂಟೆಗಳಿಂದ ಅಕ್ಕಿ ಚಲ್ಲುವ

ದ್ಯೆ, ಮುರಿಯೋ ಮುರಿಯೋ ಯಂಬ ಶಬ್ದ ಸ್ವರದಿಂ ಅಕ್ಕಿ ಚಲ್ಲುವದು ಯಂಬ ಕಟ್ಟಂ ರಚಿಸಿದನಾ ಭೂತಾಳಪಾಂಡ್ಯ.

ಬಳಿ ೧೮, ಬಂಣ ನೀರು ಬಳಿ ೪. ಬಳಿಗೆ ಸಮರ್ಥನಾದ ಅರಸು ಉಳ್ಳ ರಾಜ್ಯದಿಂ ಶೀಮೆಯಲ್ಲಿ ಬಳಿಸಾವಿರ ಬ್ರಂಹ್ಮನ ನಿಲ್ಲಿಸಿದವನ ಬಳಿ ಶುದ್ಧ. ಸಮರ್ಥನಲ್ಲದ ಬಳಿ ಬ್ರಂಹ್ಮ ಇಲ್ಲದ ಬಳಿ, ಅರಸು ಶೀಮೆಯಲ್ಲಿ ಇಲದಿದ್ದರೆ, ಆ ಬಳಿ ಬಂಣ ಕಂಮಿ ಯಂಬ ಕಟ್ಟು ಮಾಡಿದನಾ ಭೂತಳಪಾಂಡ್ಯ.

ಸಾವು ಬಾಳು ಯಂತೆಂದಡಾ—ಹಿರಿ ಕಿರಿ ತಾಯ್ಕಿ ಮಕ್ಕಳು, ಹಿರ್ಯೆ ಹೆಂಣು ಹಿರ್ಯೆ ಗಂಡು ಅಳಿ ಉಳಿಗೆ ನಿಲ್ಲುವದ್ಯೆ ಹಾರ್ತು, ಹಿರಿದು ಕಿರಿದು ಸಂತಾನಕ್ಕೆ, ಪಾಲು ಪಗದಿಗೆ ಕಾರಣವಿಲ್ಲ. ಕಡಮೆ ಬಾಳು ಜನರು ಕೂಡಿ ನಡಕೊಳ್ಳಬೇಕು. ಅದರೊಳಗೆ ಅಕ್ಕ ತಂಗಿಯರಲ್ಲಿ ವಿರುದ್ಧವಾಗಿ ಕಂಡರೆ, ಹಿರಿಯಾಕೆ ಕಿರಿಯವಳಿಗೆ ಮನೆ ಮನವಾರ್ತೆಗಳ ಕೊಟ್ಟು, ಉರಿಶಿರಿಗೆ ತಾನ್ಯೆ ಬಾಧ್ಯಸ್ಥಳಾಗಿ, ನಡಿಸಿ ಕೊಂಡು ಬರ ಬೇಕು ಯಂತಾ ಕಟ್ಟು ರಚಿಸಿ ನಿತೂದಿಗಳಾಗ ಕೂಡದೆಂದನಾ ಭೂತಾಳಪಾಂಡ್ಯ. ಪಟ್ಟಪಟ್ಟಿ ಉಳ್ಳ ಸ್ಥಳಗಳಿಗೆ ಅಳಿ ಉಳಿದವನ್ಯೆ ಹಾರ್ತು, ಕಡಿಮೆ ಸಂತಾನಕ್ಕೆ ಕಾರಣವಿಲ್ಲ. ಉಳಿ ಅಳಿದ ಮ್ಯೇಲೆ ಕಾರಣ ಉಂಟು ಯಂದು ಕಟ್ಟು ಬರದು ಶ್ಯೇರಿಸಿದನಾ ಭೂತಾಳಪಾಂಡ್ಯ.

ಬದುಕುಗಳು ಯಂತೆಂದಡಾ—ಮದುವೆಯಾದ ಹೆಂಣಿಗೆ ತೆರವಿನ ಹಣ ಹಾರ್ತು, ವಂದು ವ್ಯೀಸದಾರಭ್ಯ ಗಂಡ ಅನುಮತಿಯಿಂದ ಕೊಟ್ಟರೂ ಸಂತಾನದವರು ತೆಗದು ಕೊಂಡಾರು. ಮಕ್ಕಳಿಗಾದರೆ ಭೂಮಿ ಮನೆ ಚಿನ್ನ ಬೆಳ್ಳಿ ದನಕರು ಯತ್ತು ಬ್ಯೀಜ ಮುಂತಾಗಿ ತಾನು ದುಡದು, ಹಿರಿಯರ ಮೂಲಿಕ ಹಾರ್ತಾಗಿ, ಅಂನ್ಯಾಕವಾಗಿ ಕೊಡ ಬಹುದು. ತಂದೆ ಬದುಕಿನಲ್ಲಿ ಮಕ್ಕಳಿಗೆ ಬಾಳು ಉಂಟು ಯಂಬ ಕಟ್ಟು ಬರಸಿದನಾ ಭೂತಾಳಪಾಂಡ್ಯ.

ಜಾತಿ ಜಾತಿಗಳಿಗೆ ನೀತಿಗಳ ನೇಮಿಸಿ, ಅಳಿ ಉಳಿ ಸಂತಾನ ಮುತ್ತಿದರೆ,
ಅದೇ ಸಂತಾನದಿ ಬಳಿ ಸಮಾನವಾದ ಹೆಣ್ಣು ತಂದು, ಸಾಕಿ ಕೊಂಡರೆ, ಅ
ದೇ ಹೆಣ್ಣು ದತ್ತಸ್ವೀಕಾರವೆಂದೂ, ಮತ್ತು ಗಂಡು ಮಕ್ಕಳಿಗೆ ದತ್ತಸ್ವೀಕಾರ
ಇಲ್ಲಾ ಯಂದೂ, ಮತ್ತಾ ಅಳಿ ಉಳಿ ಮರ್ಯಾದಿ ಸ್ಥಳಗಳಿಗೆ ಸಂತಾನವಿಲ್ಲಾ
ಯಂದೂ, ಮೂರುವರೆ ತೀರದು, ಹೆಂಡತಿ ಮಕ್ಕಳಿಗೆ ಕಾಡುವರೆ ತೀರದು,—
ಸ್ವೀಕಾರವಿಲ್ಲದೆ ಅಳಿದರೆ, ಅದಕ್ಕೆ ನಾಲ್ಕು ಯಂಟು ಹದಿನಾರು ಇದ್ದು, ಮ
ತ್ತಾ ಬಳಿ ಸಾಲಿನ ಹೆಣ್ಣು ಗಂಡು ತಂದು ನಿಲಿಸಿದಡೆ, ಅವರೇ ಬಾಧ್ಯಸ್ಥ
ರಾದಾರೇ ಹಾತುಃ, ಹೆಂಡತಿ ಮಕ್ಕಳಿಗೆ ಸಲ್ಲದು ಯಂಬ ಕಟ್ಟು ಬರಸಿದನಾ
ಭೂತಾಳಪಾಂಡ್ಯ.

ಪೇಟೆ ಪಟ್ಟದ ವರ್ತಕರಿಗಾಗಲಿ, ಭೃತ್ಯ ಪರಿಚಾರಕ ಇತ್ಯಾದಿ ಮೂಲ ಸ
ಮಸ್ತರಿಗೆ ಅಳಿಯ ಸಂತಾನವೆಂಬ ಸಂಬಂಧ ಯಂದು, ಹಡಗು ಮೂರ
ರಲ್ಲಿ ಬಂದ ಸಿದ್ಧರಸ ಹಸರು ರತ್ನಗಳಿಗೆ ಈ ದ್ವಾತ್ರಿಂಶದ್ಗ್ರಾಮದ ಮ
ಹಾಜನರುಗಳ ಶಾಸ್ತ್ರ ಕಟ್ಟಳೆಗೆ ವಿರೋಧವಾದ ಕಟ್ಟಳೆಗಳ ಉಂಟೆನಿಸಿ, ಬಂ
ದ ರಸರತ್ನಗಳಿಗೆ ಅಪಹಾರಕವಲ್ಲದ ಮೂಲಕವೆಂತೆಂದಡಾ—ಹಡಗುಗಳಿ
ಗೆ ಆ ಕುಂಡೋದರನ ನಿಮಿತ್ತವಾಗಿ ಬಲಿ ಪೂಜೆಗಳ ಕೊಟ್ಟು, ಆಗ ಈ
ಬ್ರಹ್ಮನಾಮಗಳು ವಿರೋಧ ಯಂಬಲ್ಲಿ, ಉಭಯ ಪಕ್ಷನಾಥರು ಕೂಡಿ ಕೊಂ
ಡು, ಮಹಾ ಜನರಿಗೆ ವಿರೋಧವಿಲ್ಲದ ಹಾಗೆ, ಈ ಪೂರ್ವಪಕ್ಷನಾಥರಿಗೆ
ನಂದರಾಜನ ಶೀಮೆಯ ವಿಂಗಡಿಸಿ, ಬಲಗೈ ಬಲ್ಲಾಳರೆಂದೂ—ಈ ಪಶ್ಚಿ
ಮಷೋಡಶ ಪಕ್ಷನಾಥರಿಗೆ ನಿಡಂಬನೆಂಬವನ ಅರಸ್ತನ ವಿಂಗಡಿಸಿ, ಯಡ
ಗೈ ಯನಿಸಿ, ಈ ಉಭಯ ಪಕ್ಷನಾಥರಿಗೆ ಉಭಯ ಬಲ್ಲಾಳರು ಯಂಬ
ಪಟ್ಟಾಭಿಷೇಕವಂ ಮಾಡಿಸಿ, ಈ ಉಭಯ ಬಲ್ಲಾಳರು ಬಳಿ ೧೬ಕ್ಕೆ ಸಮ

ರ್ಥರಾದವರೆಂದೂ, ಆಗ ಇವರು ಸತ್ತರೆ, ಇವರ ಸಂತಾನದ ಹುಟ್ಟು ಮಕ್ಕಳ ಸಂತಾನವಾದರೂ, ಅಳಿಯ ಸಂತಾನದ ಕಟ್ಟು ಕಟ್ಟಳೆಯೇ ನಡಿಯ ಬೇಕು. ಈ ಪಟ್ಟದ ಬಲ್ಲಾಳರು ಸತ್ತರೆ ಪ್ರತಿನಿಧಿ ಬೈಕುಂಟೆ ಹೆಣವ ಮಾಡಿ, ಈ ಹದಿನೆಂಟು ಬಳಿಯವರೂ ಕೂಡಿ, ಈ ಹೆಣವ ಸುಟ್ಟು, ಪೂಮಾಡ ಕೈಮಾಡ, ನೆಲೆಉಪ್ಪರಿಗೆ, ಚತುರಂಗ, ತೋರಣ, ಸರ್ವವಾದ್ಯ, ಭೇರಿ ದೋಲುಗಳಿಂದ ಈ ಹದಿನೆಂಟು ಬಳಿಯವರು ಅಕ್ಕಿ ಚಲ್ಲದೆ ಇದ್ದರೆ, ಈ ಹದಿನೆಂಟು ಬಳಿಗೆ ಸೂತಕ ಪಾತಕ ಉಂಟು. ಅದು ಗುರುವಾದ ಕಾರಣ, ಈ ಬಳಿಯವರು ಶಿಷ್ಯರಾದ ಕಾರಣ, ಈ ಸೂತಿಕ ಪಾತಕವ ಆಚರಿಸಿ ಕೊಂಡು ಬರ ಬೇಕು ಯಂಬ ಕಟ್ಟು ಮಾಡಿದನಾ ಭೂತಾಳಪಾಂಡ್ಯ.

ಹದಿನಾರು ಕಟ್ಟಳೆಗಳ ವಿವರ.

೧. ಈ ಅಳಿಯ ಸಂತಾನಕ್ಕೆ ವಂದು ಸಂತಾನಕ್ಕೆ ವಂದೇ ಹೆಂಣಾಗಿ, ಅದಕ್ಕೆ ಗಂಡ ಸತ್ತರೆ, ಮುಂದೆ ಸಂತಾನ ಅಭಿವೃದ್ಧಿ ಹ್ಯಾಗೆ ಯಂದು ಕೇಳಿಕೊಳ್ಳಲು, ಮತ್ತ್ಯಾರ್ವನಿಗೆ ಪುಡುಗಿಯ ಕೊಡುವರೆ ತಂದೆ ತಾಯಿಗಳು ಯೋಗ್ಯರಲ್ಲ. ಮಾವ ಮೊದಲಾದ ಸಂತಾನದವರು ಕೊಡ ಬಹುದು. ತಂದೆ ತಾಯಿಗಳು ತನ್ನ ಪೊಂಣಿಗೆ ಧಾರೆ ಯರದು ಕೊಡುವರೆ, ಧಾರೆ ಗಿಂಡಿ ಮುಟ್ಟುವರೆ ಪಾಣತುರ್, ಧಾರಾ ಪೂರ್ವಕವಾಗಿ ಕೊಡುವ ಕಟ್ಟಳೆಗಳು ಇಲ್ಲವೆಂದನಾ ಭೂತಾಳಪಾಂಡ್ಯ.

೨. ಅದರೊಳಗೆ ವಂದು ಪೊಂಣಿಗೆ ಗಂಡ ಸತ್ತರೆ, ಆ ಪೊಂಣು ಬುಡವಳತಿ ಯಂಬ ಪೆಸರು. ಅದಕ್ಕೆ ಉಡಿಗೆ ಕೊಡದ ಮೊದಲು, ಅವಳಿಗೆ ಬಸರು ಬಂದಡೆ ಸರಿಜಾತಿಯವನಾದರೆ ಆತನ ಕೈಯ ಅಪರಾಧವ ಕೊಂಡು, ಆ ಪೊಂಣನ್ನು ಆತಗೆ ಬುಡಧಾರೆ ಯರದು ಕೊಡ ಬಹುದೆಂದನಾ

ಭೂತಾಳಪಾಂಡ್ಯ. ಆ ಪೊಣ್ಣಿಗೆ, ಮ್ಯೇಲ ಜಾತಿಯವನಾದಡೆ, ಇಡಿಸಿ ಕಾಡ ಬಹುದು. ಕೀಳು ಜಾತಿಯವನಾದರೆ, ಆತನ ಕ್ಯೈಯ ಅಪರಾಧ ತೆಗದು ಕೊಂಡು, ಈ ಪೊಣ್ಣುಗಳನ್ನ ಬಲ್ಲಾಳರು ವಿಕ್ರಯ ಮಾಡ ಬಹುದೆಂದನಾ ಭೂತಾಳಪಾಂಡ್ಯ.

೩. ಮತ್ತು ಮದುವೆಯಾದ ಪೊಣ್ಣನ್ನು ಬಿಟ್ಟು, ಗಂಡನು ದೇಶಾಂತರಕ್ಕೆ ಪೋಗ್ಯಾದರೆ, ವರ್ಷ ಐದು ದಾಟಿದ ಬಳಿಕ, ಮತ್ತ್ಯೋರ್ವನಿಗೆ ಕೂಡಿಸಿ, ಉಡಿಗೆ ಕಾಡ ಬಹುದೆಂದನಾ ಭೂತಾಳಪಾಂಡ್ಯ. ಸರಿ ಜಾತಿ, ಊಟು ಜಾತಿಯಾಗಿ, ಅವಳಿಗೆ ಗಂಡ ಇಲ್ಲದ ವ್ಯೇಳ್ಯದಲ್ಲಿ ಬಸರು ಬಂದರೆ, ಮ್ಯೇಲ ಜಾತಿಗೆ ತಾಡಿಗೆ, ಸಮ ಜಾತಿಗೆ ಉಡಿಗೆ, ಹೀನ ಜಾತಿಗಾದರೆ ಬಿಡುಮಾನ್ಯ ಅಪರಾಧಗಳ ಮಾಡಿ, ಆ ಜಾತಿಗೆ ಕೂಡಿಸ ಬಹುದೆಂದನಾ ಭೂತಾಳಪಾಂಡ್ಯ.

೪. ಆ ಪೊಣ್ಣುಗಳಿಗೆ ಮದಿವೆಯಾದ ಬಳಿಕ, ನಾಲ್ಕು ಮೂರು ಮಕ್ಕಳಾದ ಮ್ಯೇಲೆ ಗಂಡ ದೇಶಾಂತರಕ್ಕೆ ಪೋಗ್ಯಾದರೆ, ಪೊಣ್ಣಿಗೆ ಬ್ಯೇರೆ ವಬ್ಬನಿಗೆ ಉಡಿಗೆ ಮಾಡಿ ಕಾಡುವರೆ ತೀರದು. ಅವಳು ಸಮ ಜಾತಿಯವನ ಸಂಗವ ಮಾಡಿ, ಗಂಡ ಬಾರದ ವಳಗೆ ಬಸರು ಬಂದರೆ, ಅವಳಿಗೆ ಉಡಿಗೆ ಕಾಡಿಸಲಿಕ್ಕೆ ಕೂಡದು. ಅದರೊಳಗೆ ಹೀನ ಜಾತಿಯವನಾದರೆ ಬಿಡುಮಾನ್ಯಳಾದಾಳು.

೫. ಮದುವೆಯಾದ ಪೊಣ್ಣಿಗೆ ಗಂಡನಲ್ಲಿ ಆ ಗಂಡನು ಇವಳ ಪಾದರ ಕಂಡು, ಇವಳ ಬರ ಪ್ಯೇಳಿ, ತೆರ ಮನೆಯವರಿಗೆ ವಪ್ಪಿಸಿದರೆ, ಅವಳನ್ನ ಬ್ಯೇರೆ ವಬ್ಬನಿಗೆ ಉಡಿಗೆ ಕಾಡ ಬಹುದು. ಗಂಡನು ತನ್ನ ಪೊಂಡತಿಯನ್ನ ಕೂಡಿಕೊಳ್ಳದೆ, ಮತ್ತೊಬ್ಬಳ ಕೂಡಿ ಕೊಂಡು, ಇವಳನ್ನ ಸಮನಾಗಿ

ನ್ಯಾಡದೆ ಇದ್ದರೆ, ಇವಳ ಸಂತಾನದವರು ಆ ಗಂಡನಿಂದ ಬರ ಪೋಳಿಸಿ, ಮತ್ತಾಬ್ಬನಿಗೆ ಉಡಿಗೆ ಕಾಡ ಬಹುದು. ಮತ್ತು ಪೊಂಡತಿಯನ್ನ ಕಂಡಾ ಬಟ್ಟೆ ಹಾಡದು, ಬೈದು, ಬಡದು, ಉಪದ್ರ ಪಡಿಸಿದರೆ, ನಾಲ್ಕು ಮೂರು ವೇಳ್ಳು ಗಂಡ ಪೊಂಡರಿಗೆ ವಿವೇಕಗಳ ಮಾಡಿಸ ಬಹುದು. ಮತ್ತು ಅವ ರಾಳಗೆ ಅವಿವೇಕಗಳ ಮಾಡಿಕಾಂಡರೆ, ಅವಳ ಸಂತಾನದವರು ಆ ಗಂಡ ನಿಂದ ಅವಳಿಗೆ ಬರ ಪೋಳಿಸಿ, ಬೇರಾಬ್ಬನಿಗೆ ಉಡಿಗೆ ಕಾಡಿಸ ಬಹುದೆಂದು ಕಟ್ಟು ಬರಸಿದನಾ ಭೂತಾಳಪಾಂಡ್ಯ.

೬. ಮದುವೆಯಾಗುವ ಮೊದಲು ಹೆಣ್ಣುಗಳು ನೆರದರೆ, ಮದುವೆ ಯಾಗದ ಮೊದಲು ಬಸರು ಬಂದರೆ, ಹಿರೇ ಜಾತಿಯಾದರೆ ಅವಳಿಗೆ ಮತ್ತು ಬಸರು ಮಾಡಿದವನಿಗೆ ಸಹಾ ಅಪರಾಧ ಮಾಡಿ, ಆತನಿಗೆ ಇಟ್ಟು ಕಾಡ ಬಹುದು. ಜಾತಿಯವನಿಗೆ ಮದುವೆ ಮಾಡಿ ಕಾಡ ಬಹುದು. ನೀಚ ಜಾ ತಿಯವನಾದರೆ, ಅವಳು ಬಿಡುಮಾನ್ಯಳಾಗುತ್ತಾಳೆಂದನಾ ಭೂತಾಳಪಾಂಡ್ಯ.

೭. ಆ ಪ್ರಕಾರ ನೆರದಂಥಾ ಪೊಣ್ಣು ಮದುವೆ ಯಾಗುವ ಮೊದ ಲು ಯಾರನ್ನಾದರೂ ಕೂಡಿ ಕಾಂಡು ನ್ಯಾಡಿ ಹ್ಯಾದರೆ, ಆ ಕೂಡಿದವನು ಸರಿ ಜಾತಿಯವನಾದರೆ, ಆತನಿಗೆ ಮದುವೆ ಮಾಡಿ ಕಾಡ ಬಹುದು; ನೀ ಚ ಜಾತಿಯವನಾದರೆ ಬಿಡುಮಾನ್ಯ; ಊಚು ಜಾತಿಯವನಾದರೆ ಇಡಿಸಿ ಕಾಡ ಬಹುದು ಯಂದು ಕಟ್ಟಳೆ ಮಾಡಿದನಾ ಭೂತಾಳಪಾಂಡ್ಯ.

೮. ಮದುವೆಯಾದ ಪೊಣ್ಣು ಗಂಡನ್ನ ಬಿಟ್ಟು, ಸರಿ ಜಾತಿಯವನ್ನ ತೆ ಗದುಕಾಂಡು ನ್ಯಾಡಿ ಪ್ಯಾದರೆ, ಅವಳನ್ನ ಆತಗೆ ಉಡಿಗೆ ಕಾಡಿಸ ಬ ಹುದು. ಮೇಲು ಜಾತಿಯಾದರೆ ಇಡಿಸಿ ಕಾಡ ಬಹುದು. ನೀಚ ಜಾತಿ ಯಾದರೆ ಬಿಡುಮಾನ್ಯ ಯಂದನಾ ಭೂತಾಳಪಾಂಡ್ಯ.

೯. ಕ್ಷತ್ರಿಯರ ಹೆಂಣುಗಳಿಗೆ ಕ್ಷತ್ರಿಯರ ಮರ್ಯಾದೆ. ಕ್ಷತ್ರಿಯರಿಗೆ ಬ್ರಾಹ್ಮಣರಿಗೆ ಸಹಾ ಕೈಧಾರೆ ಮಾಡಿ, ಮದುವೆ ಮಾಡಿ ಕಾಡ ಬಹುದು; ಸರಿ ಜಾತಿಯಾಗಲಿ ಹೀನ ಜಾತಿಯಾಗಲಿ ಆದರೆ, ಬಿಡುಮಾನ್ಯಳಾಗುತ್ತಾಳೆ ಯಂದನಾ ಭೂತಾಳಪಾಂಡ್ಯ.

೧೦. ಜೈನರ ಜಾತಿಗೆ,—ಸಮ ಜಾತಿಯಾದರೆ, ಕೂಡಿಸಿ ಕಾಡ ಬಹುದು. ಹೆಚ್ಚು ಕಂಮಿ ಜಾತಿಗೆ ಕೂಡಿದವಳಾದರೆ, ಬಿಡುಮಾನ್ಯಳಾಗುತ್ತಾಳೆ ಯಂದನಾ ಭೂತಾಳಪಾಂಡ್ಯ.

೧೧. ಮಲವರ ಜಾತಿ ಹೆಂಣಾದರೆ, ಮೇಲು ಜಾತಿ ಸಮ ಜಾತಿಯಾದರೆ, ಅವಳಿಗೆ ಇಡಿಸಿ ಕಾಡ ಬಹುದು. ಹೀನ ಜಾತಿಯವನಾದರೆ ಬಿಡುಮಾನ್ಯ. ಬರ ಹೇಳುವರೆ ಅಸಖ್ಯವೆಂದನಾ ಭೂತಾಳಪಾಂಡ್ಯ.

೧೨. ನಾಯಂಮಾರ ನಾಯರ ಈ ೨ ಜಾತಿಗಳಿಗೆ ಕಂನ್ಯಾಕಲ್ಯಾಣ ಹಾಗೂ ಸ್ವಯಂವರವಿಲ್ಲಾ. ಆ ಮೇಲೆ ಸ್ವಜಾತಿಗೆ, ಬ್ರಾಹ್ಮಣರು ಮೊದಲಾದ ಉಚಿತು ಜಾತಿಗೆ ಸಹಾ, ಇಡಿಸಿ ಕಾಡ ಬಹುದೆಂದನಾ ಭೂತಾಳಪಾಂಡ್ಯ.

೧೩. ಕದಂಬ ಜಾತಿ,—ಕುಮಾರ ಬಲ್ಲಾಳನಾದರೆ, ಸ್ವಜಾತಿ ಕ್ಷತ್ರಿ ಬ್ರಾಹ್ಮಣಾದಿಗಳಿಗೆ ಇಡಿಸಿ ಕಾಡ ಬಹುದು; ಹೀನ ಜಾತಿಯಾದರೆ ಬಿಡುಮಾನ್ಯಳಾದಾಳು ಯಂದನಾ ಭೂತಾಳಪಾಂಡ್ಯ.

೧೪. ಸ್ಥಾನಿಕರಿಗೆ, ಅಂಬಲವಾಸಿಗಳಿಗೆ,—ಸ್ವಜಾತಿ ಬ್ರಾಹ್ಮಣ ಜಾತಿ ಅಲ್ಲದೆ, ಅಂನ್ಯ ಹೀನ ಜಾತಿಯಾದರೆ, ಬಿಡುಮಾನ್ಯಳಾದಾಳು ಯಂದನಾ ಭೂತಾಳಪಾಂಡ್ಯ.

೧೫. ಪದಾರ್ಥಿ ಹಾರಪಾದುವಾಳು,—ಈ ಜಾತಿ ಹೆಂಣುಗಳಿಗೆ ಸರಿ

ಜಾತಿಯಾದರೂ, ಊಚು ಜಾತಿಯಾದರೂ, ಉಡಿಗೆ ಕೊಟ್ಟು, ಇಡಿಸಿ ಕಾಡ ಬಹುದು ಯಂದನು ಭೂತಾಳಪಾಂಡ್ಯ.

೧೬. ಅರಸುಗಳಿಗೆ ಆದರೆ,— ಬ್ರಾಹ್ಮಣಧಾರೆಯ ಮಾಡಿ ಕಾಡ ಬಪುದು. ಆತನಲ್ಲಿ ಪುಟ್ಟಿದ ಮಕ್ಕಳಿಗೆ ಅಂನ್ಯತವಾಗಿ ಕಾಡುವದರಿಂದ, ಕಂಭ ಕುಂಭಾದಿಗಳಿಂದ ಧಾರೆ ಯರಸಿ ಕಾಡ ಬಪುದೆಂದನು ಭೂತಾಳಪಾಂಡ್ಯ. ಆ ಅರಸುಗಳಲ್ಲಿ ಅಂನ್ಯತವಾಗಿ ಕಾಡುವರೆ ಅಸಾಧ್ಯವಾದ ಅರಸುಗಳಾದರೆ, ಬ್ರಾಹ್ಮಣ ಮರ್ಯಾದೆ ಧಾರೆಗಳು ಮಾಡಿಸುವದು ಅಸಾಧ್ಯವೆಂದನು ಭೂತಾಳಪಾಂಡ್ಯ. ಚೌಟ ಬಂಗರರಿಗೆ ಬ್ರಾಹ್ಮಣ ಕಟ್ಟಳೆ, ಶುಭ ಅಶುಭ ಮರ್ಯಾದೆಗಳು ಉಂಟೆನಿಸಿ, ಈ ಚಿಟುಪಾಡಿ ನಿಡಂಬೂರು ಬಲ್ಲಾಳರಿಗೆ ಶುಭ ಅಶುಭಗಳಲ್ಲಿ ಅಳಿಯ ಸಂತಾನದ ಮರ್ಯಾದಿಗಳು ಉಂಟೆನಿಸಿ, ಈ ತುಳುವರ ಮೊದಲು ನಾವಿಕರುಗಳಿಗೆ ಪುಟ್ಟು ಕಟ್ಟು ಕಟ್ಟಳೆ ಅಟಕವಾಗಿ ನಡದು ಬರ ಬೇಕೆಂಬ ಪುಟ್ಟು ಕಟ್ಟು ಕಟ್ಟಳೆಗಳ ಮಾಡಿಸಿದನು ಭೂತಾಳಪಾಂಡ್ಯ.

ಈ ಭೂತಾಳಪಾಂಡ್ಯ ರಾಯಗೆ ಪಟ್ಟವಾದ ೧೨ನೇ ವರುಷದಲ್ಲಿ ಪಟ್ಟದ ಮೇಲಿಂದ ಕೆಸವಣ್ಣ ಬಸವಣ್ಣ ಯಂಬ ಜೈನರ ವಿದ್ವಾಂಸರನ್ನ ಕರಸಿ, ಅವರಿಗೆ ಉಡುಗರೆ ಉಚಿತಗಳ ಕೊಟ್ಟು, ಅವರಿಂದ ಉಂಟಾದ ಮುವ್ವತ್ತೆರಡು ನಗರಗಳ ವಿವರ. ಕೆಸವಣ್ಣಗೆ ಬಾರಕೂರಾದಿ ೧೬ ನಗರ. ಬಸವಣ್ಣಗೆ ಮಂಗಲೂರಾದಿ ೧೬ ನಗರ. ಬಾರಕೂರಿಗೆ ಚೌಟರೂ ಚಿಟಪಾಡಿ ಬಲ್ಲಾಳರೂ ನಗರಾಧೀಶ್ವರರು. ಮಂಗಲೂರಿಗೆ ಬಂಗರೂ ನಿಡಂಬೂರ ಬಲ್ಲಾಳರೂ ನಗರಾಧೀಶ್ವರರು. ಈ ೩೨ ನಗರಗಳಿಗೆ ಮುವತ್ತೆರಡು ಬಸ್ತಿಗಳನ್ನು ಕಟ್ಟಿ, ಜೈನಾದಿ ಉತ್ತಮರು ಇರುವ ಪೇಟೆಗೆ, ಪೇಟೆಯಂತಾ

ಹೆಸರು. ಅದರಲ್ಲಿರುವಾತನೇ ಪಟ್ಣಸೆಟ್ಟಿ. ೪—೮—೧೬ ಯಂಬ ಜನರು ಪೇಟೇ ಹಾಲ್ಲರು. ಈ ಚತುಸ್ಸಂಗದಲ್ಲಿ ಶೇರಿದ ಜನರಿಗೆ ಪೇಟೆಯವರು ಯಂತಾ ಹೆಸರು. ಬ್ರಹ್ಮ, ಕ್ಷತ್ರಿ, ವೈಶ್ಯ, ಶೂದ್ರ, ಈ ನಾಲ್ಕು ವರ್ಣವು ವಂದೇ ಸ್ಥಳದಲ್ಲಿ ಕೂಡುವದಾದಕಾರಣ, ಇದಕ್ಕೆ ಚತುಸ್ಸಂಗ ಯಂತಾ ಹೆಸರು. ಈ ಪೇಟೆಯಲ್ಲಿ ನಾನಾ ಜಿನಸುಗಳ ಮಾರುವಂಥಾ ಜನರಿಗೆ ವರ್ತಕರು ಯಂತಾ ಹೆಸರು. ಇವರಲ್ಲದೆ ಚಿಂನ ಬೆಳ್ಳಿ ಕ್ರಯ ವಿಕ್ರಯ ಮಾಡುವಂಥವರು ಚಿನಿವಾರರು ಯಂತಾ ಹೆಸರು. ಈ ಪೇಟೆಯಲ್ಲಿ ಬಂದಂಥಾ ಜಿನಸುಗಳು, ಹೋಗುವದಂಥಾ ಜಿನಸುಗಳು ಸಹಾ ಸುಂಕ ಗುತ್ತಿಗೆ ಮುಂದೆ ತೂಕ ಮಾಡುವಂಥವರು ತ್ಯಾಲಾಧಾರಿಗಳು. ಸಕಲ ಜಿನಸುಗಳ ಕೂಡಿಗೆ ಮಾಡಿ, ಸಕಲ ಅಂಗಡಿಕಾರರಿಗೆ ಕೊಟ್ಟು ಮಾರಿಸುವಂಥವರು ಸಾವಕಾರರು. ನವರತ್ನ ವಸ್ತ್ರಾದಿಗಳನ್ನು, ನವಧಾನ್ಯಗಳನ್ನು ಯೆತ್ತಿನ ಮೇಲೆ ತಂದು, ಹೋರಾಟಗಳ ನಡಿಸುವಂಥವರು ಶೆಟ್ಟಿಗಾರರು. ಈ ಜನರೆಲ್ಲಾ ವಂದೇ ದಿಕ್ಕಿನಲ್ಲಿ ಕೂಡಿದರೆ ಸಾವಕಾರರು ಯಂತಾ ಹೆಸರು. ಇದರಲ್ಲಿ ಕೈವಾಡದ ಜನರು ಈ ಪೇಟೆ ಬೈಸಾಲು* ಮನೆಗಳ ಕಟ್ಟಿಸಿದರೆ, ಕೇರಿ ಯನಿಸಿ ಕೊಳ್ಳುವದು. ಜವುಳಿಗಳ ಮಾರುವ ಅಂಗಡಿಗಳು ಸಮನಾಗಿ ಇದ್ದರೆ, ಅದು ಮಳಿಗಿ ಯನಿಸುವದು. ಅದರಲ್ಲಿ ಸಾವಿರಾರು ವರಹಾನ್ನ ಜಿನಸುಗಳ ತುಂಬಿಸಿ ಇಡುವಂಥಾ ದೊಡ್ಡ ಮನೆಗಳು ಇದ್ದರೆ, ಭಂಡಸಾಲೆಗಳು ಯಂತಾ ಯನಿಸಿ ಕೊಳ್ಳುವದು. ಪಾಂಚಾಲರ ಕೇರಿಯಲ್ಲಿ ಚಿಂನ ಬೆಳ್ಳಿ ನಗಗಳ ಮಾಡುವಲ್ಲಿ, ತಾಂಬ್ರ ಹಿತ್ತಾಳಿ ಪಾತ್ರೆಗಳ ಮಾಡುವಲ್ಲಿ, ಕಬ್ಬಿಣ ಬಡಿಗೆ, ಮರದ ಬಡಿಗೆ, ಕಡಹಾದ ಕೆಲಸ ಇತ್ಯಾದಿಗಳ ಮಾ

* ಉಭಯ ಸಾಲು.

ಡುವ ಸ್ಥಳಕ್ಕೆ ಪಾಂಚಾಲರ ಕೇರಿ ಯನಿಸಿ ಕೊಳ್ಳುವದು. ಕುಂಬಾರರು, ದೇವಡಿಗರು, ವಾಲಗದವರು ಇದ್ದರೆ, ಅದು ಕುಂಬಾರ ಕೇರಿಯೊಳಗೆ ಅಡಕ. ಸಮಗಾರರು, ಅಗಸರು, ಕ್ಷೌರಿಕರು, ಪೂಲಿಗೆಯವರು, ಇವರೆಲ್ಲಾ ಸಮಗಾರ ಕೇರಿಯಲ್ಲಿ ಅಡಕ. ಮತ್ತು ಮ್ಲೇಚ್ಛಾದಿ ಜನರು ವ್ಯಾಪಾರಸ್ಥ ಮೊದಲಾದವರು ಸಹಾ ಇದ್ದರೆ, ಅದು ವ್ಯಾಪಾರ ಕೇರಿ ಯನಿಸುವದು. ಮತ್ತು ಸೂಳೆಯರು, ಮಾಲೆಯರು, ಬಿಡುಸೂಳೆಯರು ಇತ್ಯಾದಿಗಳು ಇದ್ದರೆ, ಸೂಳೆಗೇರಿ ಯನಿಸುವದು. ಮತ್ತು ಮಧು ಮಾಂಸ ಸಾರಾಯಾದಿಗಳ ಮಾರುವ ಸ್ಥಳಗಳಿಗೆ ನಿಷಿದ್ಧ ಕೇರಿ ಯಂತಾ ಹೆಸರು. ಆ ಕೇರಿಯ ಸಮೀಪದಲ್ಲಿ ಹಾಲೇರ ಸಾಲು ಗುಡಿಗಳು ಇದ್ದರೆ, ಹಾಲಗೇರಿ ಯಂತಾ ಹೆಸರು. ಕೇರಿಗಳು ಇಲ್ಲದೆ, ಬರಿ ಪೇಟೆಯಾದರೆ, ಪೇಟೆ ಯನಿಸುವದು. ಕೇರಿಗಳಿರೆ, ಪಟ್ಟಣ ಯನಿಸುವದು. ಆ ಪಟ್ಣದಲ್ಲಿ ಸುತ್ತ ಗಂಡಿ, ಮಧ್ಯ ಕೋಟೆ, ಗಡಿಗಡಿಗಳಲ್ಲಿ ಗಂಡಿ, ಅಲ್ಲಿ ಅರಸುಪಟ್ಟ ಸಹಾ ಇದ್ದರೆ, ಅದು ಬಂದರ ಯನಿಸುವದು. ಅದರಲ್ಲಿ ಲಕ್ಷ ಗುಡಿಗಟ್ಟು ಇದ್ದರೆ, ನಗರ ಯನಿಸುವದು. ಮತ್ತು ಚಾತುರ್ಲಕ್ಷ ಗುಡಿ ಮೇಲೆ ಆದರೆ, ಆ ನಗರಕ್ಕೆ ಜಯಂತಿ ಯಂಬ ಹೆಸರು.

ಈ ಮೂವ್ವತ್ತೆರಡು ನಗರ ಯಂದಡೆ, ಬಾರಕೂರಾದಿ ೧೬ ನಗರಕ್ಕೆ ೪ ಲಕ್ಷ ಗುಡಿಗಟ್ಟು, ಮಂಗಲೂರಾದಿ ೧೬ ನಗರಕ್ಕೆ ಮೂರು ಲಕ್ಷ ಗುಡಿಗಟ್ಟು. ಆ ಬಾರಕೂರಾದಿ ೧೬ ನಗರಗಳ ವಿವರ—ಬಾರಕೂರು ೧. ಕಡಮ ೨. ಮೂಡಬಿದ್ರೆ ೩. ಕಾರ್ಕಳ ೪. ಬಸರೂರು ೫. ಬಂಗಾಡಿ ೬. ಪಡುಬಿದ್ರೆ ೭. ಯೇಣೂರು ೮. ಕಾಪು ೯. ಮುದ್ರಾಡಿ ೧೦. ಸುರಾಲು ೧೧. ನಾರಾವಿ ೧೨. ಯರಮಾಳ ೧೩. ಅಳವು ೧೪. ಮುಂಡ್ಕೂರು ೧೫.

ಬೈಲಂಗಡಿ ೧೬. ಇವು ಕೆಸವಂಣನ ಪೇಟೆ, ಪಟ್ಟಣ, ಬಂದರ, ನಗರ ಇತ್ಯಾದಿಗಳು. ಬಸವಂಣನು ಮಾಡಿದ ನಗರಗಳ ವಿವರ—ಮಂಗಲೂರು ೧. ಕಾಸರಗೋಡು ೨. ಮೂಲ್ಕಿ ೩. ವಿಟ್ಲ ೪. ಉಳ್ಳಾಲ ೫. ಬಂಟ್ವಾಳ ೬. ಮಣೇಲು ೭. ಉಡುಪಿ ೮. ಪಣಂಬೂರು ೯. ನೆಲ್ಲಿಕಾರ ೧೦. ಮಂಜೇಶ್ವರ ೧೧. ನೇರಂಕಿ ೧೨. ಪಾಣೆಮಂಗಲೂರು ೧೩. ಮರದಾಳ ೧೪. ವಳಲಂಕೆ ೧೫. ಸುಳ್ಯ ೧೬. ಇವು ಬಸವಂಣ ಮಾಡಿದ ನಗರಗಳು. ಇವು ಭೂತಾಳಪಾಂಡ್ಯನ ಹುಟ್ಟು ಕಟ್ಟು ಕಟ್ಟಳೆಗಳಂ ಸಮಾಪ್ತ.

## ಅಳಿಯ ಸಂತಾನದ ಬಳಿಗಳ ವಿವರ.

೧. ಬಾಗೆಟ್ಟಿಣಾಯ. ೨. ಬಾಂನ್ಯಂಣಾಯ. ೩. ಪುಲ್ಯಟ್ಟಣಾಯ. ೪. ಪಾಲಂಣಾಯ—೧. ಬಂಗರಂಣಾಯ, ಇರುವತ್ತೂರುಬಳಿ; ಇದಕ್ಕೆ ಹೆಂಣು ಗಂಡು ಕಾಡುವ ಮರ್ಯಾದಿ ಇಲ್ಲಾ. ೨. ಕುಂದಲಂಣಾಯ, ೩. ಪಂಗಲಂಣಾಯ, ೪. ಕಬೂರ್ರಂಣಾಯ; ಇವು ೪ ಬಳಿಯೂ ವಂದೇ. ವಳಗೆ ಬರದ ಪುಲ್ಯಟ್ಟಂಣಾಯ ಮೊದಲಾದ ೪ ಬಳಿಗೂ ನಂಟತನ ವುಂಟು.—ಪೆರ್ಗಡಂಣಾಯ. ಕೆಲ್ಲರಬಂಣಾಯ. ಹಿರಿಬಂಣಾಯ. ಈ ೩ ಬಳಿಗೆ ನೆಂಟತನವಿಲ್ಲಾ.—ಉಪ್ಪುರಂಣಾಯ. ಉದ್ದರಂಣಾಯ. ಈ ೨ ಬಳಿಯೂ ವಂದ್ಯೇ ಆಗಿರುತ್ತದೆ.—ಕ್ಯಾಚಟ್ಟಿಬಂಣಾಯ, ಕ್ಯಾಚಿರಂಣಾಯ; ಈ ೨ ಬಳಿಯೂ ವಂದ್ಯೇ ಆಗಿರುತ್ತದೆ.—ಪಾಲಬಂಣಾಯ, ಐಯಬಂಣಾಯ; ಈ ೨ ಬಳಿಯೂ ವಂದ್ಯೇ.—ನೆಲಬಂಣಾಯ, ಉಜಟ್ಟಿಬಂಣಾಯ; ಈ ೨ ಬಳಿಯೂ ವಂದ್ಯೇ.—ಉಳಿಬಂಣಾಯ, ಕುಂದಾಣೆಬಂಣಾಯ, ಕರಂಬರಂಣಾಯ, ಬರ್ಮರಂಣಾಯ; ಇವು ನಾಲ್ಕಕ್ಕೆ

ವಷ್ಟು ಬಳಿ ಇಲ್ಲಾ.—ಯಲ್ಲಾ ಬಳಿಯಲ್ಲಿಯೂ ಇವರಿಗೆ ನೆಂಟತನವಾಗುತ್ತದೆ. ಅಂತು ಬಳಿ *೧೮ಕ್ಕಂ ಸಮಾಪ್ತ.

---

ಭೂತಾಳಪಾಂಡ್ಯ ರಾಯನು ಅಳಿಯ ಸಂತಾನ ಯಂಬದಾಗಿ ಮಾಡಿದ ಕಟ್ಟೂ ಇದರ ಕಾರಣವೂ ೨ ಪ್ರತಿಗಳ ಆಧಾರದಿಂದ ಇಲ್ಲಿ ಛಾಪಿಸಿ ಅದೆ. ಈ ಪ್ರತಿಗಳಲ್ಲಿ ಅನೇಕ ತಪ್ಪುಗಳಿದ್ದರೂ, ಪ್ರಯತ್ನದಿಂದ ಆಗುವಷ್ಟು ತಿದ್ದಿ ಅದೆ. ಆದಾಗ್ಯೂ ಸಾಕಷ್ಟು ಹಳ್ಳೇ ಪ್ರತಿಗಳು ಸಿಕ್ಕದೆ ಇದ್ದ ಕಾರಣ, ಅಲ್ಲಿ ಇಲ್ಲಿ ಅಲ್ಪ ತಪ್ಪುಗಳು ಉಳಿದಿದ್ದಾವು. ಈ ತುಳು ದೇಶದ ಜನರು ಇಲ್ಲಿ ಛಾಪಿಸಿದ ಕಟ್ಟು ಕ್ರಯಕ್ಕೆ ತಕೊಳ್ಳುವದರಿಂದ, ಯೆಲ್ಲಾ ಖರ್ಚು ಆಗಿ ಹೋಗುವ ಪಕ್ಷದಲ್ಲಿ, ಮತ್ತೊಂದು ಸಾರಿ ಅದನ್ನು ಛಾಪಿಸುವದು ಒಳ್ಳೇದಂತಾ ಕಂಡರೆ, ತನ್ಮಧ್ಯ ಬೇರೆ ಒಳ್ಳೇ ಪ್ರತಿಗಳು ಸಹಾ ಸಿಕ್ಕಿದರೆ, ಉಳಿದು ಹೋದ ತಪ್ಪುಗಳನ್ನು ಸಹಾ ತಿದ್ದುಪಡಿ ಮಾಡಲಿಕ್ಕೆ ಪ್ರಯತ್ನ ಮಾಡಲಾದೀತು.

ಭೂತಾಳಪಾಂಡ್ಯನ ಸಂಕ್ಷೇಪವಾದ ಕಥೆಯಲ್ಲಿಯೂ ಕಟ್ಟಿನಲ್ಲಿಯೂ ಬುದ್ಧಿಯಿಂದ ಚನ್ನಾಗಿ ಆಲೋಚಿಸ ತಕ್ಕ ಕೆಲವು ಸಂಗತಿಗಳುಂಟು. ಅವುಗಳನ್ನು ಸತ್ಯಪ್ರಿಯರೆಲ್ಲರೂ ಆಲೋಚಿಸುವದಕ್ಕೂ ಗ್ರಹಿಸುವದಕ್ಕೂ ಪ್ರಯತ್ನ ಮಾಡ ತಕ್ಕದು.

**ಕಥೆಯ ವಿಷಯ.** ಇದರಲ್ಲಿ ಹೇಳಿರುವ ಕುಂಡೋದರನೆಂಬ ಭೂತರಾಜನು ಇದ್ದಾನೋ ಇಲ್ಲವೋ ಯೆಂಬದನ್ನು ನಾವಿಲ್ಲಿ ಸದ್ಯಕ್ಕೆ ವಿಚಾ

* ಲೆಖ್ಖ ಮಾಡಿದರೆ ಹದಿನಾರೇ ಬಳಿ ಆಗುತ್ತದೆ.

ರಿಸುವದಿಲ್ಲಾ. ಆದಾಗ್ಯೂ ಭೂತರಾಜರೂ ಪಿಶಾಚಿಗಳೂ ಇದ್ಧಾರೆ ಯೆಂಬದು ನಿಶ್ಚಯ. ಆದರೆ ದೈವಪಾಂಡ್ಯನ ಹಡಗಗಳು ಗರಿಗತ್ತಲೆ ಹಿಮ ಸುತ್ತಿದ್ದ ದ್ವೀಪಾಂತರಕ್ಕೆ ಹೋಗಿ, ಅಲ್ಲಿ ಕೆಸರಿನಲ್ಲಿ ಹೂಳಿದವು ಯೆಂಬ ಮಾತು ಸಂಶಯಕರವಾಗಿರುತ್ತದೆ. ಹಿಂದು ಜನರು ಭೂಗೋಳ ವಿದ್ಯೆಯಂನು ತಿಳಿಯದವರಾಗಿದ್ದ ಕಾರಣ, ಮೊದಲು ಯಾರೂ ಹೋಗದಂಥಾ ದೂರ ದೇಶಕ್ಕೆ ಹಡಗಗಳು ಹೋಗಿ ಬಂದದ್ದಾದರೆ ಗರಿಗತ್ತಲೆ ಹಿಮ ಸುತ್ತಿದ ದ್ವೀಪಾಂತರಕ್ಕೆ ಹೋಗಿ ಬಂದವು ಯೆಂತಾ ಕಟ್ಟು ಕಥೆ ಮಾಡಿದ್ದು ಆಶ್ಚರ್ಯವಲ್ಲಾ. ಇಲ್ಲಿಂದ ಪಶ್ಚಿಮಕ್ಕೆ ಹೋದರೆ ಗರಿಗತ್ತಲೆ ಹಿಮ ಸುತ್ತಿದ ದ್ವೀಪವು ಯೆಲ್ಲಿಯೂ ಶಿಕ್ಕಲಿಕ್ಕಿಲ್ಲಾ.

ದೈವಪಾಂಡ್ಯನ ಹೆಂಡತಿಯು ತನ್ನಮಕ್ಕಳಲ್ಲಿ ಯಾರನ್ನಾದರೂ ನರಬಲಿಯಾಗಿ ಕಾಡೆನೆಂತಾ ಹೇಳಿದ ಮೇಲೆ, ದೈವಪಾಂಡ್ಯನ ತಂಗಿ ಸಂತ್ಯವತಿಯು ಮತ್ತೆ ಭೂತಾಳಪಾಂಡ್ಯನೆಂಬ ಹೆಸರುಗಾಂಡ ಜಯಪಾಂಡ್ಯನಂನು ನರಬಲಿಯಾಗಿ ಕಾಡುವದಕ್ಕೆ ಸಿದ್ಧವಾದ್ದರಿಂದಲೂ, ತರುವಾಯ ಆ ದೈವಪಾಂಡ್ಯನ ಹಡಗಗಳಲ್ಲಿ ಬಂದ ಸಂಪತ್ತೆಲ್ಲಾ ಅದೇ ನರಬಲಿಯ ಕಾರಣಾದಿಂದ ಮಕ್ಕಳಿಗೆ ಶಿಕ್ಕದೆ, ತಂಗಿಯ ಮಗನಾದ ಭೂತಾಳಪಾಂಡ್ಯನಿಗೆ ಪ್ರಾಪ್ತಿಯಾದ್ದರಿಂದಲೂ, ಅರಸನಾದ ಭೂತಾಳಪಾಂಡ್ಯಗೆ ಹ್ಯಾಗ್ಯಾ, ಹಾಗೆಯೇ ಇನ್ನೂ ಮುಂದೆ ಅರಸು ಪ್ರಜೆಗಳಿಗೆ ಮಾವನ ಆಸ್ತಿ ಶಿಕ್ಕಬೇಕೆಂತಾ ಅಳಿಯ ಸಂತಾನದ ಕಟ್ಟು ಮಾಡಲಾಯಿತು ಯೆಂಬದಾಗಿ ಹೇಳಿ ಅದೆ. ಒಬ್ಬನ ಹೆಂಡತಿ ಒಂದು ಕಡೆಯಲ್ಲಿ ಒಂದು ಸಮಯದಲ್ಲಿ ನರಬಲಿಯ ಕಾರಣಾದಿಂದ, ತನ್ನಮಕ್ಕಳಿಗೆ ಆಸ್ತಿಯಾದರೂ ಹೋದರೆ ಚಿಂತೆಯಿಲ್ಲಾ ತನ್ನಮಕ್ಕಳು ಬದುಕಿದರೆ ಸಾಕು ಯೆಂಬ ಅಪೇಕ್ಷೆಯಿಂದ ದೈವಪಾಂಡ್ಯನ

ಆಸ್ತಿಯ ಬಾಧ್ಯತೆಯನ್ನು ಬಿಟ್ಟದ್ದಾದರೆ, ದೇಶದಲ್ಲಿ ಸಮಸ್ತರ ಹೆಂಡತಿಯರು ಹಾಗೆಯೇ ಮಾಡ್ಯಾರು ಯಂತಾ ಆಲ್ಯಾಪಿಸಿ, ಮಕ್ಕಳ ಸಂತಾನ ತೆಗದು, ಅಳಿಯ ಸಂತಾನ ಮಾಡಿದ್ದು ನ್ಯಾಯವಾಗಿ ಕಾಣುವದಿಲ್ಲಾ.

ಕಟ್ಟಿನ ವಿಷಯ. ಕ್ಷತ್ರಿಯ ವೈಶ್ಯ ಶೂದ್ರರಾದ ಈ ತ್ರಿಜಾತಿಗಳಿಗೆ ಅಳಿಯ ಸಂತಾನವಂತೆ; ಬ್ರಾಂಹ್ಮಣರಿಗೆ ಮಾತ್ರವೇ ಮಕ್ಕಳ ಸಂತಾನ. ಬ್ರಾಂಹ್ಮಣರು ವಿದ್ಯೆಯೂ, ಬುದ್ಧಿಯೂ, ಕುಶಲತ್ವವೂ ಉಳ್ಳವರಾಗಿದ್ದ ಕಾರಣ, ಅವರ ಮೇಲೆ ಅಳಿಯ ಸಂತಾನದ ಕಟ್ಟು ಹಾಕಲಿಕ್ಕೆ ಆಗಲಿಲ್ಲಾ. ಆದರೆ ಬುದ್ಧಿಬಲ ಕಡಿಮೆಯಾದ ಬೇರೆ ಜಾತಿಗಳಿಗೆ ಭೂತಾಳಪಾಂಡ್ಯನು ಈ ಕಟ್ಟು ಮಾಡಿ ಬಿಟ್ಟನು. ಹೆದರುವವನನ್ನು ಹೆದರಿಸುವದು ಹೆಚ್ಚು. ಇಲ್ಲದಿದ್ದರೆ ಬ್ರಾಂಹ್ಮಣರ ತಂಟೆಗೆ ಮಾತ್ರ ಹೋಗದೆ, ಬಲಹೀನರಾದ ಬಂಟರು ವಕ್ಕಲರು ಮುಂತಾದವರ ಮೇಲೆ ಈ ಭಾರ ಇಡುವದು ಯಾಕೆ?

ಅಳಿಯ ಸಂತಾನದ ಕಟ್ಟಿನಿಂದ ಜನರಿಗೆ ನಷ್ಟ ಭ್ರಷ್ಟ ಕಷ್ಟವಾಯಿತಲ್ಲದೆ, ಲಾಭವೇನೂ ಬರಲಿಲ್ಲಾ. ಬಂಟರು ವಕ್ಕಲರು ಮುಂತಾದವರ ಆಸ್ತಿ ಯೆಲ್ಲಾ ಹೆಚ್ಚಾಗಿ ಬ್ರಾಂಹ್ಮಣರಿಗೂ ಮುಸಲಮಾನರಿಗೂ ಕ್ರೈಸ್ತರಿಗೂ ಆಗಿ ಹೋಯಿತು. ಯಾವ ಮನುಷ್ಯನಿಗಾದರೂ ಸ್ವಭಾವದ ಪ್ರಕಾರ ಮಕ್ಕಳ ಮೇಲೆ ಹೆಚ್ಚು ಪ್ರೀತಿ, ಅಳಿಯಂದಿರ ಮೇಲೆ ಅಲ್ಲಾ. ಹೀಗಿರುವದರಿಂದ, ಆಸ್ತಿಯ ಯಜಮಾನಿಕೆ ನಡಿಸುವವನು ತಾನಿರುವಾಗಲೇ ಭೂಮಿ ಇತ್ಯಾದಿ ಅಡವು ವಿಕ್ರಯ ಮಾಡಿ ಹೆಂಡತಿ ಮಕ್ಕಳಿಗೆ ಗೋಪ್ಯದಲ್ಲಿ ಹಣ ಕೊಟ್ಟು ಬಿಡುತ್ತಾನೆ. ಅಳಿಯಂದಿರು ಬಾಧ್ಯರಾಗುವಾಗ್ಯೆ, ಮೂಲ ಮಾತ್ರವಲ್ಲಾ, ಹೆಚ್ಚಾಗಿ ಯಥೇಷ್ಟ ಸಾಲ ಸಹಾ ಪಡಕೊಳ್ಳುತ್ತಾರೆ. ಆಸ್ತಿಯು ಪರರ ಕೈಯಲ್ಲಿ ಬಿತ್ತು, ಮತ್ತು ಮಕ್ಕಳ ಗತಿ ಯೇನು? ಅವರು ಅಂ

ನ್ಯಾಯದಿಂದ ಪಡ ಕೊಂಡ ಹಣವನ್ನು ಗೋಪ್ಯದಲ್ಲಿ ಇಡಲಿಕ್ಕೆ ಪ್ರಯತ್ನ ಮಾಡುತ್ತಿರಲಾಗಿ, ಅದು ಸಹಾ ವಿಶೇಷವಾಗಿ ಪರರ ಕೈಯಲ್ಲಿ ಬಿದ್ದು ಹೋಗುತ್ತದೆ. ಹೀಗಾಗಿ ಮಕ್ಕಳಿಗೂ ಇಲ್ಲಾ, ಅಳಿಯಂದಿರಿಗೂ ಇಲ್ಲಾ.

ಮನುಷ್ಯರಲ್ಲಿ ಪಾಪವೂ, ಅಂನ್ಯಾಯವೂ, ದುರ್ಗುಣವೂ ಹೆಚ್ಚುತ್ತಿರಲಾಗಿ, ವಂದೇ ತಾಯಿಯ ಮಕ್ಕಳಲ್ಲಿ ಸಹಾ ಯೆಷ್ಟೋ ವ್ಯಾಜ್ಯ ವ್ಯವಹಾರ ಹುಟ್ಟುತ್ತದೆ.! ಅಳಿಯಂದಿರು ಪೊಟ್ಟಾಗಿ ವಂದೇ ತಾಯಿಯ ಮಕ್ಕಳಲ್ಲಾ. ದೇವಪಾಂಡ್ಯನಿಗೆ ವಬ್ಬಳೇ ತಂಗಿ ಇದ್ದಳು, ವಬ್ಬನೇ ಅಳಿಯನು ಸಹಾ. ಇಲ್ಲಿ ಯಲ್ಲಾ ಸುಲಭವಾಗಿ ನಡೀತು. ಆದರೆ ಯಾರಿಗಾದರೂ ಯರಡು, ಮೂರು, ನಾಲ್ಕು, ಐದು ಮಂದಿ ಅಕ್ಕ ತಂಗಿಯಂದಿರು ಇದ್ದರೆ, ಮತ್ತು ಇವರಲ್ಲಿ ಇಪ್ಪತು ಮುವ್ವತ್ತು ಮಕ್ಕಳು ಇದ್ದರೆ, ಯಲ್ಲರಲ್ಲಿ ವಿವೇಕವಿರುವದು ಅತಿ ಅಪರೂಪ. ವಬ್ಬೊಬ್ಬಳು ಸಹೋದರಿಯು ತನ್ನ ಮಕ್ಕಳಿಗೆ ಆಸ್ತಿ ಶಿಕ್ಕಬೇಕೆಂತಾ ಪ್ರಯತ್ನ ಮಾಡುತ್ತಿರಲಾಗಿ, ಅವರಲ್ಲಿ ಬಹಳ ಅಂನ್ಯಾಯವೂ ಮೋಸವೂ ಉಂಟಾಗಿ, ವ್ಯಾಜ್ಯ ವ್ಯವಹಾರ ನಡದು, ಯೆಲ್ಲಾ ನಿಷ್ಕರ್ಷವಾಗುವಷ್ಟರೊಳಗೆ, ಆಸ್ತಿಯು ವಬ್ಬ ಸಾವಕಾರನಿಗೆ ಮಾರಿ ಹೋಯಿತು. ಹಣವು ವಕೀಲ ರುಸುಮಿಗೂ, ಸುಳ್ಳು ದಸ್ತಾವಜಗಳಿಗೂ, ಸುಳ್ಳು ಸಾಕ್ಷಿಗಾರರಿಗೂ, ಗುಮಾಸ್ತ ಮುನಶಿಯವರ ಲಂಚಕ್ಕೂ ಖರ್ಚು ಆಗಿ ಹೋಯಿತು. ಈ ಪ್ರಕಾರ ಅಳಿಯ ಸಂತಾನದವರ ಆಸ್ತಿಯೂ, ಐಶ್ವರ್ಯವೂ, ಹಣವೂ, ಮಾನವೂ, ಸೌಖ್ಯವೂ, ಸಂತೋಷವೂ ಕಡಿಮೆಯಾಗುತ್ತಾ ಬಂದು, ನಿಸ್ಸಂತಾನವಾಗಲಿ ಯಂತಾ ಭೂತಾಳಪಾಂಡ್ಯನು ಇಟ್ಟ ಶಾಪವು ಪೂರ್ತಿಯಾಯಿತು. ಆದರೆ ಈ ಕಟ್ಟು ಮೀರಿದ ಕಾರಣದಿಂದಲ್ಲಾ, ಮೀರದೆ ಇದ್ದ ಕಾರಣ. ಇದೇ ತುಳು ದೇಶದಲ್ಲಿ ಮುಸಲಮಾನರೂ ಕ್ರೈಸ್ತರೂ ಆಗುವ ಜನರು ಭೂತಾಳ

ಪಾಂಡ್ಯನ ಕಟ್ಟು ಮೀರುವ ಕಾರಣ, ಸುಖವಾಗಿ ಬಾಳುತ್ತಾರೆ. ಆದರೆ ಭೂತಾಳಪಾಂಡ್ಯನ ಕಟ್ಟು ಮೀರದವರು ದಿನ ಹೋಗುತ್ತಾ, ಬಡವರಾಗಿ ಕ್ಷೀಣವಾಗುತ್ತಾರೆ.

ಈ ಕಟ್ಟು ಸ್ವಭಾವಕ್ಕೆ ವಿರೋಧವಾಗಿರುವದರಿಂದಲೂ, ಅನ್ಯಾಯಕ್ಕೂ ಬಡತನಕ್ಕೂ ನಾನಾ ಪ್ರಕಾರದ ಕಷ್ಟಕ್ಕೂ ಕಾರಣವಾಗಿರುವದರಿಂದಲೂ, ಅಳಿಯ ಸಂತಾನದವರೆಲ್ಲರು ಈ ಕಟ್ಟು ಬಿಡುವದಕ್ಕೆ ಉಪಾಯವಿಲ್ಲವೋ ಯಂಬದನ್ನು ಚನ್ನಾಗಿ ಆಲೋಚಿಸ ತಕ್ಕದ್ದು. ವಂದು ಸುಲಭವಾದ ಮಾರ್ಗವೇನಂದರೆ—ಹಿಂದುಸ್ಥಾನದ ರಾಜಧಾನಿಯಾಗಿರುವ ಕಲಿಕಾತ ಪಟ್ಟಣದಲ್ಲಿ ಲೆಜಿಸ್ಲೆಟಿವಕೌನ್ಸಿಲ್ ಯಂಬ ಕಾನೂನು ಮಾಡುವ ನ್ಯಾಯದಾಯಕ ಸಭೆ ಉಂಟು. ಈ ಸಭೆಯವರ ಪರಿಮುಖವಾಗಿ ಅಳಿಯ ಸಂತಾನದವರು ಸಹಾ ತಮ್ಮ ಕಾರ್ಯ ಸಿದ್ಧಿ ಮಾಡಿ ಕೊಳ್ಳ ಬಹುದು. ಬಂಗಾಳದಲ್ಲಿರುವ ಬುದ್ಧಿಯುಳ್ಳ ಹಿಂದು ಗೃಹಸ್ಥರು, ವಿಧವೆಗಳಿಗೆ ತಿರಿಗಿ ಮದುವೆಯಾಗ ಕೂಡದ್ದರಿಂದ ಬರುವ ಸಂಕಷ್ಟಗಳನ್ನು ನೋಡಿ, ನ್ಯಾಯದಾಯಕ ಸಭೆಯವರಿಗೆ ಅರ್ಜಿ ಮಾಡಿ, ವಿಧವೆಗಳಿಗೆ ಪುನರ್ವಿವಾಹವಾದ್ದಾದರೆ, ಅವರಲ್ಲಿ ಹುಟ್ಟುವ ಮಕ್ಕಳಿಗೆ ಬಾಧ್ಯತೆ ಸಿಕ್ಕುವ ಹಾಗೆ ಮಾಡ ಬೇಕಾಗಿ ಬೇಡಿ ಕೊಂಡರು. ನ್ಯಾಯದಾಯಕ ಸಭೆಯವರು ಅಂಥಾ ಕಾನೂನು ಮಾಡಿದರು. ಅದಕ್ಕೆ ಗವರ್ನರ್ ಜನರಲ್, ಅಂದರೆ ಸರ್ವಾಧಿಪತಿಯ ಸಂಮತಿ ಸಿಕ್ಕಿತು. ಹಾಗೆಯೇ ತುಳು ದೇಶದ ಅಳಿಯ ಸಂತಾನದ ಗೃಹಸ್ಥರೆಲ್ಲರು ಮಕ್ಕಳ ಸಂತಾನಕ್ಕೆ ವಪ್ಪಿ ಕೊಂಡು, ಸದರಿ ನ್ಯಾಯದಾಯಕ ಸಭೆಯವರಿಗೆ ಆ ವಿಷಯದಲ್ಲಿ ಅರ್ಜಿ ಮಾಡಿದಾದ್ದರೆ, ಅಳಿಯ ಸಂತಾನ ಹೋಗಿ ಮಕ್ಕಳ ಸಂತಾನ ಆದೀತೆಂಬದಕ್ಕೆ ಸಂಶಯವಿಲ್ಲಾ. ಅಥವಾ ಯಲ್ಲರೂ ಕೂಡದೆ ಇದ್ದ ಪ

ಕ್ಷದಲ್ಲಿ, ವಂದು ಸಂತಾನದ ಅಳಿಯಂದಿರೂ ಮಕ್ಕಳೂ ಸಂಮತ ಪಟ್ಟು, ಇನ್ನೂ ಮುಂದೆ ತಮಗೆ ಮಕ್ಕಳ ಸಂತಾನವಾಗ ಬೇಕೆಂತಾ ಅರ್ಜಿ ಬರಕೊಂಡ ಪಕ್ಷದಲ್ಲಿ, ಅವರಿಗೆ ಪ್ರತ್ಯೇಕವಾಗಿ ಮಕ್ಕಳ ಸಂತಾನವಾಗಲಿಕ್ಕೆ ಅಡ್ಡಿಯಾಗದು. ಆದಾಗ್ಯೂ ಈ ಪ್ರಕಾರ ಮಾಡುವದಾದರೆ, ಬೇರೆ ಬ್ರಾಂಹ್ಮಣ ಇತ್ಯಾದಿ ಮಕ್ಕಳ ಸಂತಾನದವರ ಹಾಗೆ, ಗಂಡು ಮಕ್ಕಳಿಗೆ ಮಾತ್ರವೆ ಬಾಧ್ಯತೆ, ಹೆಂಣು ಮಕ್ಕಳಿಗೆ ಬಾಧ್ಯತೆ ಇಲ್ಲಾ ಯಂತಾ ಮಾಡುವದು ವೊಳ್ಳೇದಲ್ಲಾ. ಅಳಿಯ ಸಂತಾನದವರಲ್ಲಿ ಅಳಿಯಂದಿರಿಗೂ ಸೊಸೆಯಂದಿರಿಗೂ ಸಮವಾಗಿ ಹ್ಯಾಗೆ ಬಾಧ್ಯತೆ ಸಿಕ್ಕುತ್ತದ್ಯೋ, ಹಾಗೆಯ್ಯೇ ಮಕ್ಕಳ ಸಂತಾನವೆಂದು ಬದಲು ಮಾಡುವದಾದರೆ, ಗಂಡು ಮಕ್ಕಳಿಗೆ ಮಾತ್ರವಲ್ಲಾ, ಹೆಂಣು ಮಕ್ಕಳಿಗೆ ಸಹಾ ಗಂಡು ಮಕ್ಕಳ ಹಾಗೆಯ್ಯೇ ಸಮವಾಗಿ ಬಾಧ್ಯತೆ ಸಿಕ್ಕ ಬೇಕೆಂಬದಾಗಿ ಅರ್ಜಿ ಮಾಡಿದ ಪಕ್ಷದಲ್ಲಿ, ಆ ಪ್ರಕಾರವಾಗಲಿಕ್ಕೆ ಅಡ್ಡಿಯಾಗದು.

ಈ ಭೂತಾಳಪಾಂಡ್ಯನ ಕಟ್ಟಿನ ವಿಷಯ ಮಾತಾಡುವಾಗ್ಯೆ, ಮತದ ಸಂಗತಿಯನ್ನು ಬೇಕೆಂದು ಬಿಟ್ಟಿದ್ಧೇವೆ. ಆಯಾ ಮತಗಳಿಗೂ ಆಯಾ ಜನರ ಸ್ಥಿತಿಗೂ, ಬಾಧ್ಯತೆಗೂ ಪರಸ್ಪರ ಸಂಬಂಧ ಇದ್ದರೂ, ಆ ಸಂಗತಿಯನ್ನು ಬಿಟ್ಟು, ಜನರಿಗೆ ಸದ್ಯಕ್ಕೆ ಸಫಲವಾಗ ತಕ್ಕದ್ದನ್ನು ಮಾತ್ರವೆ ಹೇಳಿದ್ಧೇವೆ. ವೋದುವವರೆಲ್ಲರು, ಮುಖ್ಯವಾಗಿ ಅಳಿಯ ಸಂತಾನದವರು, ಇಲ್ಲಿ ಪ್ರೀತಿಯಿಂದ ಹೇಳಿದ್ದನ್ನು ಮನಸ್ಸಿಗೆ ತಕ್ಕೊಂಡು, ಮುಂದೆ ತಮಗೆ ಅಭಿವೃದ್ಧಿ ಆಗುವ ಹಾಗೆ ಪ್ರಯತ್ನ ಮಾಡ ತೊಡಗಿದರೆ, ನಮಗೂ, ಕಡೆಯಲ್ಲಿ ಅವರಿಗೂ, ಸಂತೋಷ ಪ್ರಾಪ್ತಿಯಾದೀತು. ದೇವರು ಯಲ್ಲರಿಗೆ ದಯ ತೋರಿಸಲಿ!

---

3,90

# ...ಳಪಾಂಡ್ಯನ

# ...ಸಂತಾನದ

# ...ಟ್ಟುಕಟ್ಟಳೆ.



...ಂಗಳೂರು:
...ಮಿಶ್ಶನ್ ಪ್ರೆಸ್.
...೧೮೫೭.